UNIVERSAL LIBRARY
OU_198567
UNIVERSAL LIBRARY

ಸುಬೋಧ

ಕುಸುಮಾಂಜಲಿ ಗ್ರಂಥಮಾಲಾ

ಕುಸುಮ ೧೩೪

# ರಷ್ಯಾದೇಶದ ಸಾಧು ಶಿರೋಮಣಿ
## ಮಹಾತ್ಮಾ
# ಲಿಯೋ ಟಾಲ್‌ಸ್ಟಾಯ್

ಯಂ. ರಾಮರಾವ್.

IK4-1
1'15K

ಸುಬೋಧ ಪ್ರಕಟನಾಲಯ
ಬೆಂಗಳೂರು ನಗರ

ಸಾ ಚ. ೧-೮-೦ ೧೯೩೨ ಬೆಲೆ ೦—೨—೦.

# ಸುಬೋಧ ಪ್ರಕಟನಾಲಯ

## ಬೆಂಗಳೂರು ನಗರ.

## ಸುಬೋಧ ಕುಸುಮಾಂಜಲಿ ಗ್ರಂಥಮಾಲಾ

**(ಸಚಿತ್ರ ಮಾಸಪುಸ್ತಕಾವಳಿ)**

ಭಾರತದೇಶದ ಪೌರಾಣಿಕ ಐತಿಹಾಸಿಕ ಸುಪ್ರಸಿದ್ಧ ಮಹಾಪುರುಷರ ಜೀವನ ಚರಿತ್ರೆಗಳನ್ನು ಓದಬೇಕಾಗಿದ್ದರೆ, ಗ್ರಂಥಮಾಲೆಗೆ ಈ ದಿನವೇ ಚಂದಾದಾರರಾಗಿರಿ. ವಾ. ಚಂದಾ. ರೂ. ೧—೮—೦. ಬಿಡಿ ಪ್ರತಿ ೦—೩—೦.

(ವಿ. ಪಿ. ಮೂಲಕ ರೂ. ೧—೧೨—೦).

---

## ಸು ಬೋ ಧ

**(ತಿಳಿಗನ್ನಡ ಸಚಿತ್ರಮಾಸಪತ್ರಿಕೆ)**

ಧಾರ್ಮಿಕ, ನೈತಿಕ, ಸಾಮಾಜಿಕ, ವಿದ್ಯಾವಿಷಯಕವಾದ ವಿವಿಧಲೇಖನಗಳು ಕರ್ಣಾಟಕದ ಸುಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟು ಪ್ರಕಟವಾಗುವುವು. ಕ್ರೌನ್ ಕ್ವಾರ್ಟೋ ೪೦ ಪುಟಗಳ ಸ್ವದೇಶೀ ಬಿಂಡು ಕಾಗದ

ವಾ. ಚಂ. **ಮೂರು ರೂಪಾಯಿ** ಮಾದರಿಪ್ರತಿ ೦—೫—೦

(ವಿ. ಪಿ. ಮೂಲಕ ರೂ. ೩—೪—೦).

---

## ಕರ್ಣಾಟಕ ಹರಿದಾಸ ಕೀರ್ತನ ತರಂಗಿಣಿ

**(ಮಾಸಪುಸ್ತಕ)**

ಶ್ರೀ ಪುರಂದರದಾಸರು, ಕನಕದಾಸರು, ಜಗನ್ನಾಥದಾಸರು ಮುಂತಾದ ಸುಪ್ರಸಿದ್ಧ ದಾಸವರ್ಯರ ಕೀರ್ತನೆಗಳು 'ಹರಿದಾಸ ಸೇವಾ ಸಮಿತಿ'ಯವರಿಂದ ಪರಿಶೋಧಿಸಲ್ಪಟ್ಟು, ಸ್ಪಷ್ಟರೀತಿಯಲ್ಲಿ ಪ್ರಕಟವಾಗುತ್ತಿವೆ.

ವಾ. ಚಂ. ಉತ್ತಮ ಪ್ರತಿ ೨—೪—೦. ವಿ. ಪಿ. ಮೂಲಕ ೨—೮—೦

ಬಿಡಿ ಸಂಚಿಕೆ ೦—೩—೦.

ಸುಬೋಧ ಮುದ್ರಣಾಲಯ, ಬೆಂಗಳೂರು ನಗರ.

। ಶ್ರೀರಾಮಸಹಾಯಂ ।

# ಸುಬೋಧ ಕುಸುಮಾಂಜಲಿ ಗ್ರಂಥಮಾಲಾ

## (ಸಚಿತ್ರ ಮಾಸಪುಸ್ತಕಾವಳಿ)

**ಮುನ್ನುಡಿ** –

'ಬಹುರತ್ನಾ ವಸುಂಧರಾ' ಎಂದರೆ 'ಭೂಮಾತೆಯು ಬಹು ರತ್ನ ವಿಭೂಷಿತಳು' ಎಂಬ ಆರ್ಯೋಕ್ತಿಯು, ಪ್ರಪಂಚದ ಬೇರೆ ಬೇರೆ ದೇಶಗಳ ಚರಿತೆಯನ್ನೂ, ಜನ-ಜನಾಂಗಗಳ ಚರಿತ್ರೆಯನ್ನೂ ನೋಡುತ್ತಹೋದಂತೆಲ್ಲ ಹೆಚ್ಚುಹೆಚ್ಚಾಗಿ ಸತ್ಯವೆನ್ನಿಸುತ್ತದೆ. ವಿಶ್ವವ್ಯಾಪಿಯಾದ ಸರ್ವೇಶ್ವರನು, ತನ್ನ ದಯಾಮಯ ಕಟಾಕ್ಷದಿಂದ ಯಾವ ದೇಶವನ್ನೂ ದೂರಗೊಳಿಸಲಾರನು. ಸ್ಥಾವರ ಜಂಗಮಾತ್ಮಕವಾದ ಈ ಬ್ರಹ್ಮಾಂಡದಲ್ಲಿ ಉದ್ಭವಿಸಿದ ಅಣುಪ್ರಾಣಿಯಿಂದ ಆನೆಯವರೆಗಿನ ಸಕಲ ಜೀವಿಗಳೊಳಗೂ ಆತನು ಅಂತರ್ಯಾಮಿಯಾಗಿರುವನೆಂದಮೇಲೆ ಅವುಗಳ ಸ್ಥಿತಿಯೂ ಸಂರಕ್ಷಣೆಯೂ ಆ ಸರ್ವೇಶ್ವರನಿಗಲ್ಲದೆ ಮತ್ತಾರಿಗೆ ಸೇರಿದುದಾಗಬೇಕು! ಹೀಗೆ ನಿಖಿಲ ಜಗತ್ತಿನ ಸಂರಕ್ಷಣೆಯ ಭಾರವನ್ನು ಹೊತ್ತವನಾದಮೇಲೆ, ಆ ಪ್ರಾಣಿಕೋಟಿಗಳಿಗೆ ಕಷ್ಟಬಂದಾಗ ದುಃಖಬಂದಾಗ, ಅವುಗಳನ್ನು ನಿವಾರಿಸಿ, ಅವರನ್ನು ಸುಖ ಸಂತೋಷಗಳಿಂದ ಪೋಷಿಸುವ ಭಾರವಾದರೂ ಆ ದಯಾಮಯನಿಗೇ ಸೇರಿದುದಾಗಿದೆ. ಈ ತನ್ನ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿಯೇ, ಆ ಲೋಕೇಶನು, ಯಾವ ಕಾಲದಲ್ಲಿ ಲೋಕದ ಯಾವ ಭಾಗದಲ್ಲಿ ದುಃಖವೂ ಸಂಕಟವೂ ಅನ್ಯಾಯವೂ ದಂಭವೂ ಮೋಸಕಾಪಟ್ಯಾದಿಗಳೂ ಹೆಚ್ಚಿರುವುವೋ ಆ ಕಾಲದಲ್ಲಿ, ಅವುಗಳನ್ನು ನಿವಾರಿಸಲು ಯೋಗ್ಯರಾದ ಮಹಾ ಪುರುಷ ರತ್ನಗಳನ್ನು ಅಲ್ಲಿ ಜನಿಸುವಂತೆ ಅನುಗ್ರಹಮಾಡುವನು. ಮನುಷ್ಯವರ್ಗವು ಸೃಷ್ಟಿಯಲ್ಲೇ ಶ್ರೇಷ್ಠವಾದುದಾಗಿ, ಮನುಷ್ಯನೇ ದೃಶ್ಯವಾಗಿ ಲೋಕಜೀವಿತದ ಕಾರ್ಯಭಾರವಾಹಕನಾಗಿರುವುದರಿಂದ ಆ ಮನುಷ್ಯವರ್ಗವೊಂದನ್ನು ಸುಧಾರಿಸಿದರೆ, ಪಶುಪಕ್ಷಿಗಳಾದಿಯಾಗಿ ಮಿಕ್ಕ ಸಕಲ ಪ್ರಾಣಿವರ್ಗಗಳ ಹಿತಸಾಧನೆಯನ್ನೂ ಮಾಡಿದಂತಾಗುವುದು. ಆದು

ವರಿಂದಲೇ ಶ್ರೀಮದ್ಭಗವದ್ಗೀತೆಯಲ್ಲಿ ಹೇಳಲ್ಪಟ್ಟ* ಶ್ರೀ ಕೃಷ್ಣವಾಕ್ಯದಂತೆ, ಲೋಕದಲ್ಲಿ ಅನ್ಯಾಯವು ಹೆಚ್ಚಿದಾಗ್ಗೆ, ಸತ್ಯ ಧರ್ಮ ನ್ಯಾಯಗಳು ನಾಶಹೊಂದುತ್ತಿದ್ದಾಗ್ಗೆ ಭಗವದ್ವಿಭೂತಿಯನ್ನು ಗಳಿಸಿದ ಮಹಾ ಪುರುಷರು ಜನ್ಮಿಸುತ್ತಿರುವುದು ಲೋಕದ ಸಕಲ ದೇಶಗಳ ಚರಿತ್ರೆಯಲ್ಲೂ ಕಂಡುಬರುತ್ತಿದೆ.

ಪ್ರಕೃತ ನಮ್ಮ ಚರಿತ್ರನಾಯಕನು ಜನಿಸಿದ ರಷ್ಯಾದೇಶದ ವಿಚಾರವು, ಕಳೆದ ಒಂದೆರಡು ಶತಮಾನಗಳಲ್ಲಿ ಅಂತಹ ಭಯಂಕರ ಸ್ಥಿತಿಯಲ್ಲಿತ್ತು. ಕೇವಲ ರಷ್ಯಾದೇಶವೊಂದೇ ಎನ್ನುವಂತಿಲ್ಲ ಯೂರೋಪಿನ ಹಲವು ದೇಶಗಳು ಆ ಸ್ಥಿತಿಯಲ್ಲಿ ಸಿಕ್ಕಿ ನರಳುತ್ತಿದ್ದುವು ದೇಶದಲ್ಲಿ ಸರ್ವತ್ರ ಅಶಾಂತತೆಯೂ, ಕ್ಷಾಮಡಾಮರಗಳೂ ವ್ಯಾಪಿಸಿದ್ದುವು. ಮನುಷ್ಯರು-ಮುಖ್ಯವಾಗಿ ಬಡವರು, ಪಶುಗಳಂತೆಯೂ ಕ್ರಿಮಿಕೀಟಗಳಂತೆಯೂ ಅಸಹ್ಯರೀತಿಯಿಂದ ಕಾಲಯಾಪನೆ ಮಾಡುತ್ತಿರಬೇಕಾಗಿದ್ದಿತು. ರಾಜ್ಯಾಧಿಕಾರಿಗಳು ನಿರಂಕುಶರಾಗಿದ್ದರು. † **ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ** ಎಂಬಂತೆ. ವಿದ್ಯಾವಂತರೂ ನಾಗರಿಕರೂ ಎನಿಸಿಕೊಂಡವರು ಸ್ವಾರ್ಥಿಗಳಾಗಿ, ದಂಭ ಅಹಂಕಾರಗಳಿಂದ ಕಣ್ಣು ಕಾಣದವರಾಗಿ, ನಿಷ್ಕರುಣಿಗಳಾಗಿ, ತಮ್ಮ ಸ್ವಾರ್ಥಸಾಧನೆಗಾಗಿ ಬಡಜನರ ಪ್ರಾಣಗಳನ್ನು ಹಿಂಡುವ ನರರಾಕ್ಷಸರಾದರು ಜನಗಳ ಧನ ಮಾನ ಪ್ರಾಣಗಳಿಗೆ ರಕ್ಷಣೆ ದೊರೆಯದಾಯಿತು. ನಿರಂಕುಶ ಚಕ್ರವರ್ತಿಯಾದ ಸಾರನ *(Czar of Russia)* ಪ್ರಭುತ್ವವು ರಾವಣ ಹಿರಣ್ಯಕಶಿಪುಗಳ ರಾಜ್ಯಭಾರದಂತೆ ಭಯದಾಯಕವಾಯಿತು. ಪ್ರಜೆಗಳು ತಲ್ಲಣಿಸಿಹೋದರು. ಅನ್ಯಾಯ ಅಪಚಾರಗಳಿಗೆ ಸಮ್ಮತಿಸಿ, ಪ್ರಭುತ್ವದ ಅಡಿಯಾಳುಗಳಾಗಿ ಜೀವಿಸಿದ್ದರಲ್ಲದೆ, ಇದು ತಪ್ಪು ಇದು ಸರಿ ಎಂದು ಹೇಳುವ ಪ್ರಸಂಗಕ್ಕೆ ಯಾವನಾದರೂ ಹೋದನೆಂದರೆ

---

* ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ಅ. ೪. ಶ್ಲೋ. ೭

† ಸಾಕ್ಷರಾ ಎಂಬ ಪದವನ್ನು ವಿಪರೀತ ರೀತಿಯಿಂದ ಎಂದರೆ ಹಿಂದಿನಿಂದ ಮುಂದಕ್ಕೆ ಓದಿದರೆ 'ರಾಕ್ಷಸಾ' ಎಂದಾಗುವುದು. ಸಾಕ್ಷರರೆಂದರೆ ಅಕ್ಷರವಿದ್ಯೆಯನ್ನು ಕಲಿತವರು. ಸಾಕ್ಷರರು ವಿಪರೀತ ಕರ್ಮಪ್ರವೃತ್ತರಾದರೆ ರಾಕ್ಷಸರೇ ಆಗುವರು.

ಒಡನೆ ಅವನಿಗೆ ದೇಶಾಂತರವಾಸವೋ ಮರಣದಂಡನೆಯೋ ಸೆರೆಮನೆಯಲ್ಲಿ
ಚಿತ್ರಹಿಂಸೆಯೋ ಸಿದ್ಧವಾಗಿರುವುದು. ಅನ್ನುವದಕ್ಕಿಲ್ಲ - ಅನುಭವಿಸುವು
ದಕ್ಕೆ ಸಾಧ್ಯವಿಲ್ಲ ಎಂಬಂತಿದ್ದ ದೇಶದ ಆ ಸ್ಥಿತಿಯಲ್ಲಿ ಬಡಜನಗಳು ಬದು
ಕಿರುವುದಕ್ಕಿಂತಲೂ ಸಾಯುವುದೇ ಮೇಲೆಂದು ಯೋಚಿಸುತ್ತಿದ್ದರೆಂದರೆ
ಅದರಲ್ಲಿ ಅತಿಶಯೋಕ್ತಿಯಿಲ್ಲ ದೇಶದಲ್ಲಿನ ಧನವಂತರು ಯಾವಾಗಲೂ
ಅಧಿಕಾರಿಗಳ ಆಶ್ರಯವನ್ನು ಕೋರುವವರೇ ಆದುದರಿಂದ, ನೇರವಾಗಿ
ಸರ್ಕಾರಕ್ಕೆ ಅಧೀನರಾಗಿರದ ಬಡಜನರು, ಈ ಸ್ವಾರ್ಥಿಗಳ ಸುಖ ಸಂತೋ
ಷಗಳನ್ನು ಹೆಚ್ಚಿಸುವುದಕ್ಕಾಗಿ ದುಡಿದು ದುಡಿದು ಹಣ್ಣಾಗುತ್ತಿದ್ದರು. ಈ
ಸ್ವಾರ್ಥತೆಯೆಂಬ ಅಸುರೀಭಾವವು - ದೈತ್ಯಾವೇಶವು, ಧನಬಲ ಜನಬಲ
ಅಧಿಕಾರಬಲ ವಿದ್ಯಾಬಲಗಳಿಂದ ಕೂಡಿದ ಮನುಷ್ಯರಲ್ಲಿ ಮನೆಮಾಡಿಕೊಂ
ಡಮೇಲೆ, ಇನ್ನು ಅವರ ಆ ರಾಷ್ಟ್ರದಲ್ಲಿ ಸುಖ ಸಂತೋಷಗಳೂ ಶಾಂತತೆ
ಸಮಾಧಾನಗಳೂ ಸತ್ಯ ಧರ್ಮ ನ್ಯಾಯಗಳೂ ಸ್ವಪ್ನದಲ್ಲೂ ದುರ್ಲಭವಾ
ಗುವುವೆಂದು ಯೋಚಿಸಿದರೆ ಅದರಲ್ಲಿ ಅತಿಶಯವೇನಿದೆ?

ಮನುಷ್ಯರಲ್ಲಿ ಆಸುರೀಭಾವವು ಹೆಚ್ಚಿ, ಅವರು ಸ್ವಾರ್ಥಿಗಳೂ ದಾಂಭಿ
ಕರೂ ಅಹಂಕಾರಿಗಳೂ ನಿಷ್ಕರುಣಿಗಳೂ ಆಗುವದಕ್ಕೆ ಅವರಲ್ಲಿ ದೈವೀಭಾ
ವವು ನಾಶವಾಗುವುದೇ ಮುಖ್ಯ ಕಾರಣವಾಗಿರುವುದು. 'ದೇವರು ಸರ್ವಾಂ
ತರ್ಯಾಮಿ ಅವನು ನನ್ನ ಹೃದಯಾಂತರ್ವರ್ತಿಯಾಗಿರುವನು. ನನ್ನಲ್ಲಿ
ರುವಂತೆಯೇ ಸಕಲ ಪ್ರಾಣಿಗಳ ಹೃದಯ ಕಮಲದಲ್ಲೂ ಆ ಲೋಕೇಶನ
ಸಾನ್ನಿಧ್ಯವಿರುವುದು. ಯಾರಿಗೆ ಮಾಡುವ ಹಿಂಸೆಯೂ ಮೋಸವೂ ಆತ
ನಿಗೆ ಅಸಮ್ಮತವಾದುದು ಎಲ್ಲರನ್ನೂ ಪ್ರೀತಿಸಿ ಸ್ನೇಹಿಸಿ ಎಲ್ಲರಲ್ಲೂ
ದಯಾಭಾವವನ್ನು ಪ್ರಕಟಿಸುವುದು ಆತನಿಗೆ ಪ್ರಿಯಕರವಾದುದು' ಎಂಬಿ
ಭಾವವು ಯಾವನ ಹೃದಯದಿಂದ ತೊಲಗಿರುವುದೋ, ಅವನ ಶುಷ್ಕ ಹೃದ
ಯವನ್ನು - 'ನಾನೇ ದೊಡ್ಡವನು, ವಿದ್ಯಾವಂತನು, ಬುದ್ಧಿವಂತನು, ಧೀರ
ನು, ಧನವಂತನು. ನನ್ನ ಸಮಾನರು ಮತ್ತಾರಿರುವರು? ಎಲ್ಲರೂ ನನಗೆ
ಅಧೀನರು' ಎಂಬ ಭಾವನೆಯೇ ವ್ಯಾಪಿಸಿರುವುದರಲ್ಲ ಸಂದೇಹವೇನು! ಹೀಗೆ
ಭಾವಿಸುತ್ತಾ ಆ ಮದಾಂಧನು ಸಕಲರನ್ನೂ ಸಕಲ ಪ್ರಾಣಿಗಳನ್ನೂ ನಿಕೃ
ಷ್ಟಭಾವದಿಂದ ಕಾಣುವನು ದೇಶದ ಮತ್ತು ಜನಾಂಗದ ಗತಿಯು ಇಂತ

ಹ ಪರಮಾವಧಿಸ್ಥಿತಿಗಿಳಿದಾಗ್ಗೆ ಅವುಗಳ ಉದ್ಧಾರಕ್ಕಾಗಿ ಜನ್ಮಿಸುವ ಮಹಾನುಭಾವನು ಮೇಲ್ಕಂಡಂತೆ ಜನಮನದಲ್ಲಿ ವ್ಯಾಪಿಸಿದ ಅನ್ಯಾಯ-ಅಸತ್ಯ ಭಾವಗಳೊಂದಿಗೆ ಹೊಡೆದಾಡಿ ಅವರ ಹೃದಯದಿಂದ ಅವುಗಳನ್ನಟ್ಟಲು ಪ್ರಯತ್ನಿಸಬೇಕಾದುದು ಹೇಗೆ ಅವಶ್ಯಕವೋ, ಸತ್ಯಧರ್ಮ ನ್ಯಾಯಗಳ ಬೀಜಗಳನ್ನೂ ಭಗವದ್ಭಕ್ತಿ ಜ್ಞಾನ ವೈರಾಗ್ಯಾದಿಗಳ ಬೀಜಗಳನ್ನೂ ಅಲ್ಲಿ ಬಿತ್ತಬೇಕಾದುದೂ ಹಾಗೆಯೇ ಅವಶ್ಯಕವು ! ಇಂತಹ ಪರಿಸ್ಥಿತಿಗಳೊದಗಿದಾಗ್ಗೆ ಎಲ್ಲಾ ದೇಶಗಳಲ್ಲೂ ಉದ್ಭವಿಸಿದ ಎಲ್ಲಾ ಮಹನೀಯರೂ ಈ ಬಗೆಯಿಂದಲೇ ಪ್ರಯತ್ನಿಸಿ ಕೃತಕಾರ್ಯರಾಗಿದ್ದಾರೆ. ಆದರೆ ಅವರ ಪ್ರಯತ್ನಗಳೂ ಕಾರ್ಯಕ್ರಮಗಳೂ ಬೋಧನೆಗಳೂ ಆಯಾದೇಶ ಕಾಲಸ್ಥಿತಿ ವ್ಯವಹಾರಗಳನ್ನು ಅನುಸರಿಸಿ ಇರಬೇಕಾದುದು ಮಾತ್ರ ಅತ್ಯವಶ್ಯಕವಿರುವುದು. ನಮ್ಮ ಕಥಾನಾಯಕನಾದ ಮಹಾತ್ಮಾ ಟಾಲ್‌ಸ್ಟಾಯಿಯೂ ಈ ಸ್ವಾಭಾವಿಕ ಮಾರ್ಗವನ್ನೇ ಅನುಸರಿಸಿ ಶ್ರಮಿಸಿ ದೇಶೋದ್ಧಾರಕನಾದನು. ಆ ಮಹನೀಯನ ಜೀವಿತವು ಸಂಗ್ರಹವಾಗಿ ಈ ಕುಸುಮದಲ್ಲಿ ಕೊಡಲ್ಪಟ್ಟಿರುವುದು. ಗ್ರಂಥಮಾಲಾಭಿಮಾನಿಗಳು, ಇದನ್ನೂ ಸ್ವೀಕರಿಸಿ ಓದಿ ಹರ್ಷಪಡಬೇಕಲ್ಲದೆ, ಗ್ರಂಥಮಾಲೆಯ ಈ ಸೇವಾಕಾರ್ಯವು ಅವ್ಯಾಹತವಾಗಿ ಸಾಗುವಂತೆ ಸ್ವಹಸ್ತ ಪರಹಸ್ತ ಸಹಾಯಮಾಡಲೂ ಕೃತನಿಶ್ಚಿತರಾಗಬೇಕು. ಇದೇ ನಮ್ಮ ಪ್ರಾರ್ಥನೆ.

ಇತಿ ಸಜ್ಜನ ವಿಧೇಯ,

ಬೆಂಗಳೂರು ನಗರ.
೨೦ ೪—೩—೧೯೩೩



ಮಹಾತ್ಮಾ ಟಾಲ್‌ಸ್ಟಾಯ್

॥ ಶ್ರೀ ರಾಮಸಹಾಯಂ ॥

# ರಷ್ಯಾದೇಶದ ಸಾಧು ಶಿರೋಮಣಿ

## ಮ ಹಾ ತ್ಮಾ

# ಲಿಯೋ ಟಾಲ್‌ಸ್ಟಾಯ್

---

## ಅಧ್ಯಾಯ ೧ — ' ಜನನ - ಮಾತೃವಿಯೋಗ '

ಸದ್ಯಃಕಾಲದಲ್ಲಿ ನಮ್ಮ ಮಾತೃಭೂಮಿ - ಈ ಭಾರತದೇಶದಲ್ಲಿ ವಿಚಾರಕ್ರಾಂತಿಯನ್ನುಂಟುಮಾಡಿ, ನಮ್ಮ ದೇಶದ ಧಾರ್ಮಿಕ ನೈತಿಕ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಲೋಕಹಿತ ಸಾಧಕವಾದ ಸುಧಾರಣೆಗಳನ್ನು ಕಲ್ಪಿಸಲು ಅಗ್ರಗಾಮಿಗಳಾಗಿರುವ ಮಹಾತ್ಮಾಜೀಯವರು, ಯಾರ ಲೇಖನಗಳ ಪಠನೆಯಿಂದ ಸ್ಫೂರ್ತಿಹೊಂದಿ ಲೋಕಸೇವಾ ಕ್ಷೇತ್ರದಲ್ಲಿ ಪ್ರವೇಶಿಸಿದರೋ ಆ ಮಹರ್ಷಿಯನೇ ನಮ್ಮ ಕಥಾನಾಯಕನು. ೧೮ - ೧೯ನೆಯ ಶತಮಾನಗಳಲ್ಲಿ ರಷ್ಯಾದೇಶದಸ್ಥಿತಿಯು ಬಹು ಶೋಚನೀಯವಾಗಿತ್ತು. ಒಂದು ದೇಶದ ಸ್ಥಿತಿಯನ್ನು ಉತ್ತಮವೆಂದಾಗಲೀ ಅಧಮವೆಂದಾಗಲೀ ಹೇಳುವುದಕ್ಕೆ ಆ ದೇಶವಾಸಿಗಳ ಸ್ಥಿತಿಗತಿಗಳನ್ನು ಕುರಿತು ಮುಖ್ಯವಾಗಿ ಗಮನಿಸಬೇಕು. ದೇಶದಲ್ಲಿ ಕೆಲವಂದಿ ಧನಿಕರಿರಬಹುದು, ಹಲವು ಉನ್ನತಕಟ್ಟಡಗಳಿರಬಹುದು, ಶೃಂಗಾರ ವನಗಳಿರಬಹುದು; ನೇತ್ರಾನಂದಕರವಾದ ರಸ್ತೆಗಳೂ ಅಂಗಡಿ ಮುಂಗಟ್ಟುಗಳೂ ಇರಬಹುದು. ಈ ಎಲ್ಲ ಬಗೆಯ ಅನುಕೂಲತೆಗಳೂ ಒದಗಿದ್ದರೂ ಜನಗಳಿಗೆ ಸುಖಸಂತೋಷಗಳು ಮಾತ್ರ ಇಲ್ಲದಿದ್ದರೆ ಅವೆಲ್ಲವೂ ವ್ಯರ್ಥ! ಒಬ್ಬ ಮನುಷ್ಯನಿಗೆ, ಬೇಕಾದಷ್ಟುಮಂದಿ ಬಂಧುಬಳಗಗಳಿರಬಹುದು, ಹೆಂಡಿರುಮಕ್ಕಳಿರಬಹುದು, ಐಶ್ವರ್ಯವಿರಬಹುದು, ಇಂದ್ರಭವನದಂತೆ ಸುಂದರವಾದ ಗೃಹಾರಾಮಗಳಿರಬಹುದು: ಆದರೆ ಅವನು ಆರೋಗ್ಯವೊಂದಿಲ್ಲದೆ ರೋಗಪೀಡಿತನಾಗಿ ಬಿದಿ

ದ್ವರೆ ಅವುಗಳಿಂದಲ್ಲಿಲ್ಲ ಎಂತಹ ಪ್ರಯೋಜನವುಂಟಾದೀತು? ದೇಶಕ್ಕೆ ಪ್ರಜೆಗಳೆಂಬುವರು ದೇಹಕ್ಕೆ ಪ್ರಾಣವಿದ್ದಂತೆ! ಪ್ರಾಣವಿಲ್ಲದ ದೇಹವನ್ನು ಗಂಧಪುಷ್ಪ ವಸ್ತ್ರ ಭೂಷಣಾದಿಗಳಿಂದ ಎಷ್ಟು ಸಿಂಗರಿಸಿದರ ಏನು ಪ್ರಯೋಜನ? ದೇಶದಲ್ಲ ಹತ್ತುಮಂದಿ ಧನಿಕರಿರಬಹುದು. ಆದರೇನು! ಆ ಧನಿಕರ ಉದಾಹರಣೆಯು ಆದ್ಯಂತ ದೇಶಸ್ಥಿತಿಯೇ ಹಾಗಿದೆಯೆಂದು ತಿಳಿಯಲು ಸಾಧಕವಾಗಲಾರದು. ದೇಶವು ಸುಭಿಕ್ಷವಾಗಿದೆ ಎನ್ನಲು, ಜನ ಜಾನುವಾರುಗಳು ಯಾವಬಗೆಯ ಉಪದ್ರವಗಳಿಗೂ ಒಳಪಡದಿರಬೇಕು ಸುಖಿನಾಗಿರಬೇಕು, ಶಾಂತತೆ ಸಮಾಧಾನಗಳಿಂದಲಿರಬೇಕು ಹಾಂಗೆ ಮಾತ್ರ ಸಾಧ್ಯವಾದೀತು.

ರಷ್ಯಾದೇಶದ ಸ್ಥಿತಿಯು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಅತಿಶಯ ಕೆಟ್ಟುಹೋಯಿತು ನಿರಂಕುಶ ಪ್ರಭುವಾದ ಝಾರ್ ಚಕ್ರವರ್ತಿಯು ವಿಶೇಷ ಸ್ವಾರ್ಥಿಯೂ ಸುಖಲೋಲುಪನೂ ಆದನು ಅವನ ಅನುಗ್ರಹ ಸಂಪಾದನೆಗಾಗಿ ಅಧಿಕಾರಿ ವರ್ಗವು ಅವನ ಇಷ್ಟದಂತೆ ಕುಣಿಯತೊಡಗಿತು. ರಾಜ್ಯಾಧಿಕಾರಿಗಳಿಗೆ ಪ್ರಜೆಗಳ ಕ್ಷೇಮಚಿಂತನೆಯಿಲ್ಲ-ಚಕ್ರವರ್ತಿಯ ಇಚ್ಛೆ ಆಶಯಗಳನ್ನು ಪೂರ್ತಿಗೊಳಿಸುವುದೇ ಮುಖ್ಯ ಕರ್ತವ್ಯವಾಗಿ ಪರಿಣಮಿಸಿತು. ರಾಜನು ಪ್ರಜಾಕ್ಷೇಮ ಚಿಂತನೆಯನ್ನು ಬಿಟ್ಟು ಸ್ವಸುಖಲೋಲುಪನಾದೊಡನೆಯೇ ಅಧಿಕಾರಿವರ್ಗವೂ ಅದೇ ಮಾರ್ಗವನ್ನು ಹಿಡಿದು ಲಂಚರುಷವತ್ತುಗಳಿಗಾಗಿ ಪ್ರಜೆಗಳನ್ನು ಪೀಡಿಸತೊಡಗಿತು ಅನ್ಯಾಯಕರವಾದ ನೂರಾರು ತೆರಿಗೆಗಳು ಹುಟ್ಟಿದುವು ಅವುಗಳನ್ನು ತೆತ್ತು ತೆತ್ತು ಪ್ರಜೆಗಳು ಹಣ್ಣಾದರು ಧನಿಕರಿಗೂ ಅಧಿಕಾರಿಗಳಿಗೂ, ಬಡವರೂ ಮನುಷ್ಯರು ಎಂಬ ಭಾವನೆಯೇ ಮನಸ್ಸಿನಲ್ಲಿ ಅಳಿಸಿಹೋಯಿತು. ಬಡಜನರ ಇರುವಿಕೆಯು ತಮಗಾಗಿ ದುಡಿಯುವುದಕ್ಕೆ ತಮ್ಮ ಸುಖ ಸಂತೋಷಗಳನ್ನು ಹೆಚ್ಚಿಸುವುದಕ್ಕೆ ಎಂಬ ಭಾವನೆಯೇ ಅವರ ಮನಸ್ಸಿನಲ್ಲಿ ಬೇರೂರಿತು ಬಡಜನರೂ ಕ್ರಿತಾದಿಗಳೂ ಪಶುಗಳಿಗಿಂತಲೂ ನಿಕೃಷ್ಟ ಸ್ಥಿತಿಯಲ್ಲಿ ಜೀವಿಸತೊಡಗಿದರು ಅನೇಕ ಸಂದರ್ಭಗಳಲ್ಲಿ ಬದುಕಿರುವುದಕ್ಕಿಂತಲೂ ಸಾಯುವುದೇ ಮೇಲು ಎಂದು ಅವರು ಯೋಚಿಸುವಂತಾಯಿತು.

ಧನಮದ ಕುಲಮದ ಅಧಿಕಾರಮದಗಳಿಂದ ಗರ್ವಿತರಾಗಿದ್ದ ಬಲಿಷ್ಠ

ರೆಲ್ಲರೂ ಬಡಜನಗಳನ್ನು ಸರ್ವವಿಧದಿಂದಲೂ ಸ್ವಾಧೀನದಲ್ಲಿಟ್ಟುಕೊಳ್ಳಲು ಸಾಧಕವೆನ್ನಿಸುವ ಹಲವು ನಿಯಮ ನಿಬಂಧನೆಗಳನ್ನು ರಚಿಸಿಕೊಂಡರು. ಪ್ರಜಾಸಮುದಾಯವನ್ನು ನಾಯಿನರಿಗಳಿಗಿಂತಲೂ ಕಡೆಯಾಗಿ ಕಾಣುತ್ತ, ಸರ್ವವಿಧದಿಂದಲೂ ಕಾಡುತ್ತ, ಅವರನ್ನು ಸಾಧ್ಯವಿದ್ದಷ್ಟು ವಿಧಗಳಿಂದಲೂ ನಿರ್ಬಂಧಗೊಳಿಸಿ ಅವರ ಪ್ರಾಣಗಳನ್ನೇ ಹಿಂಡಿಬಿಡುತ್ತಿದ್ದರು. ಆ ಬಡ ಪ್ರಜೆಗಳು ಎಷ್ಟು ಬಗೆಯಿಂದ ಎದೆಯರಕ್ತವನ್ನೇ ಬಸಿದು ದುಡಿದರೂ ಆ ನಿಷ್ಕರುಣಿಗಳ ಮನಸ್ಸಿನಲ್ಲಿ ಲೇಶಮಾತ್ರವೂ ದಯೆಯೆಂಬುದೇ ಕಂಡ ಬರದೆ, ಅವರು ದುಡಿದು ಗಳಿಸಿದ ಧನಧಾನ್ಯಗಳನ್ನೆಲ್ಲ ನಿಶ್ಚಿಂತೆಯಿಂದ ತುಂಬಿಕೊಂಡು ಅವುಗಳನ್ನು ನಿರ್ಲಜ್ಜೆಯಿಂದ ತಮ್ಮ ಸುಖಸಂತೋಷಗಳಿಗಾಗಿ ಮನಬಂದಂತೆ ವೆಚ್ಚಮಾಡುವರು ಜನಸಮುದಾಯದಲ್ಲಿ ದಾರಿದ್ರ್ಯವು ಸರ್ವತ್ರ ವ್ಯಾಪಿಸಿತು ಹೊಟ್ಟೆತುಂಬುವಷ್ಟು ಅನ್ನ, ಮಾನಮುಚ್ಚುವಷ್ಟು ಬಟ್ಟೆ ಇಷ್ಟಕ್ಕೂ ಗತಿಯಿಲ್ಲದೆ, ಆ ದುರ್ದೈವಿಗಳು ಬದುಕಿರಲು ಮಾರ್ಗವಿಲ್ಲದೆ ಸಾಯಲು ಸಾಧ್ಯವಿಲ್ಲದೆ, ನಿತ್ಯಮರಣ ದುಃಖದಿಂದ ಕಾಲಯಾಪನೆ ಮಾಡುತ್ತಿದ್ದರು ಪ್ರಜಾವರ್ಗದಲ್ಲ ಕ್ಷಾಮಡಾಮರಗಳೂ, ಮಾರಿಕಾದಿ ಉಪದ್ರವಗಳೂ ವ್ಯಾಪಿಸಿದುವು. ಜನಗಳು ನೂರುನೂರಾಗಿ ಸಾವಿರಸಾವಿರವಾಗಿ ಲಯವಾಗತೊಡಗಿದರು ದೇಶವೆಂಬುದು ಕಿಚ್ಚುಹತ್ತಿ ದಹಿಸಲ್ಪಡುತ್ತಿದ್ದ ಕಾಡಿನಂತೆ ಭಯಂಕರವಾಗಿ ಕಾಣಿಸತೊಡಗಿತು.

ಇಂತಹ ಅಸಹನೀಯ ಸ್ಥಿತಿಯಲ್ಲಿ ಎಷ್ಟು ಕಾಲ ಜೀವಿಸಿರಲು ಸಾಧ್ಯ? ಪ್ರಜೆಗಳೆಲ್ಲರೂ ಬೇಸತ್ತು ಹೋದರು. ತಮ್ಮ ಸ್ಥಿತಿಯು ಇಂದು ಉತ್ತಮಗೊಳ್ಳಬಹುದು, ನಾಳೆ ತಮಗೆ ಕ್ಷೇಮವುಂಟಾಗಬಹುದು,—ತಮ್ಮ ಮೇಲೆ ಧನಿಕರಿಗೂ ದಯೆಯುಂಟಾದೀತು ಎಂದು ನಿರೀಕ್ಷಿಸಿದ್ದುದೆಲ್ಲವೂ ವ್ಯರ್ಥವಾಯಿತ. ಕೊನೆಗೆ ಹೀಗೆ ಕ್ಷಣಕ್ಷಣಕ್ಕೂ ಸಾಯುತ್ತಿರುವುದಕ್ಕಿಂತಲೂ-ಬಲವಂತರಾದ ನಿಷ್ಠುರಿಗಳಾದ ಈ ಸ್ವಾರ್ಥಿಗಳನ್ನು ವಿರೋಧಿಸಿ ಒಮ್ಮೆಗೇ ಸಾಯಬೇಕು ಅಥವ ಅವರನ್ನು ನಿರ್ಮೂಲಗೊಳಿಸಿ ತಾವು ಬದುಕಬೇಕು ಎಂಬ ಯೋಚನೆಯು ಅವರ ಮನಸ್ಸಿನಲ್ಲಿ ಹುಟ್ಟಿತು. ಈ ಯೋಚನೆಯು ಜನಮನದಲ್ಲಿ ಮೊಳಕೆಗೊಂಡಿತಾದರೂ. ವ್ಯವಸ್ಥಿತರೂಪದಿಂದ ಏರ್ಪಟ್ಟ ಪ್ರರಾಜ್ಯಭಾರವನ್ನು ಎದುರಿಸುವ ಕಾರ್ಯವೇನು ಸಾಮಾನ್ಯವಾದುದೇ? ಅದ

ರಿಂದಾಗುವ ಪರಿಣಾಮವೇನು ಕ್ಷೇಮಕಾರಿಯಾದುದೇ ! ಪ್ರಜಾವರ್ಗದಲ್ಲಿ ಒಂದು ಒಕ್ಕಟ್ಟು, ಒಮ್ಮನಸ್ಸತೆ, ಧೈರ್ಯಸಾಹಸಗಳು, ಕಷ್ಟಸಹಿಷ್ಣುತಾ ಸಾಮರ್ಥ್ಯ, ಏಕನಿಷ್ಠ, ಮನೋದಾರ್ಢ್ಯ ಮುಂತಾದುವುಗಳೆಲ್ಲ ಒಂದು ವ್ಯಾಪಿಷ್ಠತರರೂಪದಿಂದ ಏರ್ಪಡದಿದ್ದರೆ ಅದು ಹೇಗೆ ಸಾಧ್ಯವಾದೀತು ! ಅವುಗಳೆಲ್ಲವೂ ಆ ದುರಂತಕಾಲದಲ್ಲಿ ನಮ್ಮ ಕಥಾನಾಯಕನ ನಿರಂತರ ಪರಿಶ್ರಮದಿಂದಲೇ ರಷ್ಯಾದ ಪ್ರಜಾವರ್ಗದಲ್ಲೂ, ಯೂರೋಪು ಖಂಡದ ಹಲವ ರಾಷ್ಟ್ರಗಳಲ್ಲೂ ವ್ಯಾಪಿಸಿದುವು. ಜನತೆಯಲ್ಲಿನ ತಾವು ಪಶುಸಮಾನರು ಕ್ಷುದ್ರ ವ್ಯಕ್ತಿಗಳು ಎಂಬ ಭಾವನೆಯು ದೂರವಾಗಿ ಅವರು, ತಾವೂ ಮನುಷ್ಯರು ಎಂದು ಯೋಚಿಸುವಂತಾಯಿತು. ಇಷ್ಟು ಕಾರ್ಯವನ್ನು ಸಾಧಿಸಿದ ಪುರುಷ ಶ್ರೇಷ್ಠನನ್ನು ಮಹಾತ್ಮನೆಂದು ಸಂಬೋಧಿಸಲು ತಡೆಯೇನಿದೆ! ಆ ಮಹನೀಯನ ಸಂಕ್ಷಿಪ್ತ ಚರಿತ್ರೆಯನ್ನೇ ವಾಚಕನು ಯಾಶಯುಳು ಈ ಮುಂದಿನ ಪುಟಗಳಲ್ಲಿ ಓದಿ ತಿಳಿಯಬಹುದಾಗಿದೆ.

ನಮ್ಮ ಕಥಾನಾಯಕನ ವಂಶವು ರಷ್ಯಾದೇಶದ ಬಹು ಪ್ರಸಿದ್ಧವಾದ ಪುರಾತನ ವಂಶಗಳಲ್ಲೊಂದು. ಈ ವಂಶದ ಇಂಡ್ರಿಸ್ ಎಂಬೊಬ್ಬ ಪುರುಷನು, ರೋಮ ಚಕ್ರಾಧಿಪತ್ಯದಿಂದ ೧೩೫೩ ನೆಯ ಸಂ||ದಲ್ಲಿ ತನ್ನ ಇಬ್ಬರು ಮಕ್ಕಳೊಂದಿಗೂ ಮೂರುಸಾವಿರಮಂದಿ ಅನುಯಾಯಿಗಳೊಂದಿಗೂ ರಷ್ಯಾ ರಾಜಧಾನಿಗೆಬಂದು, ಚಕ್ರವರ್ತಿಯನ್ನು ಸಂದರ್ಶಿಸಿದನು. ಆತನ ವರ್ಚಸ್ಸು, ಬೆಂಬಲ ಮುಂತಾದುವುಗಳನ್ನು ನೋಡಿ, ಚಕ್ರವರ್ತಿಯು ವಿಶೇಷ ಭೂಸ್ವಾಮ್ಯವನ್ನು ಕೊಟ್ಟು ಆದರಿಸಿದನು. ಅವನ ವಂಶದಲ್ಲಿ ಆಂಡ್ರ್ಯೂ ಎಂಬ ಅವನ ಮರಿಮಗನು ಮಾಸ್ಕೋ ರಾಜಧಾನಿಗೆ ಬರಲು, ಆಗ ಅಲ್ಲಿ ಆಳುತ್ತಿದ್ದ ಪ್ರಭುವು ಅವನನ್ನೂ ಬಹು ಮರ್ಯಾದೆಯಿಂದ ಕಂಡು, ಆತನಿಗೆ ಟಾಲ್‌ಸ್ಟಾಯ್ ಎಂಬ ಬಿರುದನ್ನು ಕೊಟ್ಟು ಗೌರವಿಸಿದನು. ಮುಂದೆ ಅವರ ವಂಶದವರಿಗೆ ಟಾಲ್‌ಸ್ಟಾಯ್ ಎಂಬುದೇ ಗೌರವನಾಮವಾಗಿ ಪರಿಣಮಿಸಿತು.

ಹೀಗೆ ಈ ವಂಶವು ಶ್ರೀಮಂತತನದಲ್ಲೇ ೧೮ ನೆಯ ಶತಮಾನದ ಕೊನೆಯವರೆಗೂ ನಡೆದುಬಂತು. ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ನಮ್ಮ ಕಥಾನಾಯಕನ ಪಿತಾಮಹನಾದ ಇಲ್ಯ ಟಾಲ್‌ಸ್ಟಾಯ್ ಎಂಬಾತನು ಕಾಜಾ಼ನ್ ಎಂಬ ಪ್ರಾಂತಕ್ಕೆ ರಾಜಪ್ರತಿನಿಧಿ (*Governor*)ಯಾಗಿ

ನಿವೃತ್ತನಾದನು. ಈತನು ಬಹು ಉದಾರಪ್ರಕೃತಿಯವನೂ ನಿಸ್ಪೃಹನೂ ಆದುದರಿಂದ, ಈತನಿಗಾಗದವರು ಇಲ್ಲಸಲ್ಲದ ಹಲವು ಕಾರಣಗಳಿಂದ ಆತನ ಮೇಲೆ ದೋಷಾರೋಪಣೆಮಾಡಿ, ಖಜಾನೆಯ ೧೦೨೦ ರೂಬೆಲ್ಸ್ ನಾಣ್ಯಗಳನ್ನು ದುರುಪಯೋಗಪಡಿಸಿಕೊಂಡನೆಂಬ ಆರೋಪವನ್ನು ಆತನಮೇಲೆ ತಂದು ೧೮೨೦ನೆಯ ಸಂ॥ದಲ್ಲಿ ಕೆಲಸದಿಂದ ನಿವೃತ್ತಿಗೊಳಿಸುವ ಒಂದು ಆಜ್ಞಾಪತ್ರವನ್ನು ಪ್ರಭುತ್ವದ ಕಡೆಯಿಂದ ಹೊರಡಿಸಿದರು. ಈ ಅಪಮಾನವನ್ನು ಸಹಿಸಲಾರದೆ ಆತನು ಮುಂದೆ ಒಂದುತಿಂಗಳೊಳಗಾಗಿಯೇ ಕಾಲವಾದನು. ಈತನ ಮಗನಿಗೆ ನಿಕೊಲಸ್ ಟಾಲ್ ಸ್ಟಾಯ್ ಎಂದು ಹೆಸರು. ಈತನೂ ಚಕ್ರಾಧಿಪತ್ಯದ ಮಿಲಿಟರಿ ಮತ್ತು ಸಿವಿಲ್ ಖಾತೆಗಳಲ್ಲಿ ಉನ್ನತೋದ್ಯೋಗಗಳನ್ನುಮಾಡಿ ಪ್ರಸಿದ್ಧನಾಗಿದ್ದನು. ಈತನು ಉನ್ನತವಂಶ ಸಂಭೂತಳೂ ಶ್ರೇಷ್ಠಗುಣಾನ್ವಿತಳೂ ಆದ ಮೇರಿಯ ವಾಲ್ಕೋನ್ಸ್ಕಿ ಎಂಬೊಬ್ಬ ಸ್ತ್ರೀಯನ್ನು ಮದುವೆಯಾದನು. ವಿವಾಹಕಾಲದಲ್ಲಿ ಕೌಂಟ್ ನಿಕೊಲಸ್ ಟಾಲ್ ಸ್ಟಾಯಿಯ ವಯಸ್ಸು ಇಪ್ಪತ್ತೆಂಟೂ ವಧುವಿನ ವಯಸ್ಸು ಮೂವತ್ತೆರಡೂ ಆಗಿದ್ದುವಂತೆ!

ನಮ್ಮ ಕಥಾನಾಯಕನು, ತನಗೆ ತನ್ನ ತಾಯಿಯ ಮುಖಪರಿಚಯವೇ ಆಗಿರಲಿಲ್ಲವೆಂದೂ, ತಾನು ಸುಮಾರು ಎರಡು ವರ್ಷದ ಮಗುವಾಗಿದ್ದಾಗಲೇ, ತನ್ನ ಮೇಲೆ ಒಂದು ಹೆಣ್ಣು ಕೂಸನ್ನು ಹೆತ್ತು ಆಕೆಯು ತೀರಿಹೋದಳೆಂದೂ ಹೇಳಿದ್ದಾನೆ. ಆಕೆಯು ಒಳ್ಳೆಯ ವಿದ್ಯಾವತಿಯಾಗಿ ಪಂಚಭಾಷಾ ಪರಿಜ್ಞಾನವುಳ್ಳವಳೂ, ಪಿಯಾನೋ ವಾದ್ಯವನ್ನು ಬಾರಿಸುವುದರಲ್ಲಿ ಅತ್ಯಂತ ಕುಶಲಳೂ, ಚಿಕ್ಕಮಕ್ಕಳಿಗೆ ಮನೋರಂಜಕವಾಗಿ ಕಥೆಗಳನ್ನು ಹೇಳುವುದರಲ್ಲಿ ಅದ್ಭುತ ಸಾಮರ್ಥ್ಯವುಳ್ಳವಳೂ ಎಂದು ಆತನು ತನ್ನ ತಾಯಿಯ ಗುಣವರ್ಣನೆ ಮಾಡಿದ್ದಾನೆ. ಅಲ್ಲದೆ ಕೇವಲ ಸಮಾಧಾನ ಪ್ರಕೃತಿಯವಳೂ, ಯಾರಿಗೂ ಎಂದೂ ಒಂದು ಕೆಟ್ಟ ಮಾತನಾಡದವಳೂ, ಸಂಸಾರನಿರ್ವಹಣೆಯಲ್ಲಿ ಅತಿಶಯ ಚತುರಳೂ ಆಗಿದ್ದಳೆಂದೂ ಆತನು ಹೇಳಿದ್ದಾನೆ. ಟಾಲ್ ಸ್ಟಾಯಿಗೆ ತನ್ನ ತಾಯಿಯು ಪುಣ್ಯತಮದೇವತೆಯು ಎಂಬ ಭಾವವು ಕೆಲವು ವೇಳೆ ಮನಸ್ಸಿಗೆ ಬಂದು, ಆತನು ತನ್ನ ಕಷ್ಟ ದೆಸೆಗಳಲ್ಲಿ ತನ್ನನ್ನು ಆಶೀರ್ವದಿಸೆಂದು ಆಕೆಯ ಆತ್ಮವನ್ನು ಪ್ರಾರ್ಥಿಸುತ್ತಿದ್ದನಂತೆ! ತನ್ನ ತಾಯಿ

ಯಲ್ಲಿ ಕಂಡುಬಂದ ಮತ್ತೊಂದು ದೊಡ್ಡ ಅನುಪಮ ಸದ್ಗುಣ ಉಂಟೆಂದು ಆತನು ಬರೆದಿದ್ದಾನೆ. ತನ್ನ ವಿಷಯದಲ್ಲಿ ಇತರರು ಏನಭಿಪ್ರಾಯ ಪಟ್ಟುಕೊಳ್ಳುತ್ತಾರೆಂಬ ಯೋಚನೆಯೇ ಆಕೆಗೆ ಇರಲಿಲ್ಲವಂತೆ! ಅಲ್ಲದೆ ಇತರರಿಗಿಂತಲೂ ಹೆಚ್ಚಾಗಿ ತನ್ನಲ್ಲಿ ಕಂಡುಬರುತ್ತಿದ್ದ ವಿದ್ಯೆ, ಬುದ್ಧಿ, ಪಾರಿಶುದ್ಧ್ಯ ಶ್ರೀ, ಉದಾರತೆ, ಐಶ್ವರ್ಯ ಮುಂತಾದುವುಗಳನ್ನು ಪ್ರದರ್ಶಿಸಿಕೊಳ್ಳುವಿಕೆಯನ್ನು ಮೆಚ್ಚದಿರುವುದಲ್ಲ—ಬೇರೊಬ್ಬರೆದುರಿಗೆ ಪ್ರಕಟಿಸಿಕೊಳ್ಳುವುದನ್ನು ಅವಮರ್ಯಾದೆಯೆಂದೂ ಆ ಪುಣ್ಯವತಿಯು ಭಾವಿಸುತ್ತಿದ್ದಳಂತೆ!

ನಿಖೊಲಸ್ ಮತ್ತು ಮೇರಿಯಾ ಟಾಲ್‌ಸ್ಟಾಯ್ ದಂಪತಿಗಳಲ್ಲಿ ನಾಲ್ಕು ಮಂದಿ ಗಂಡು ಮಕ್ಕಳೂ ಒಬ್ಬ ಮಗಳೂ ಜನಿಸಿದರು. ಆ ನಾಲ್ಕು ಮಂದಿ ಗಂಡು ಮಕ್ಕಳಲ್ಲಿ ನಮ್ಮ ಕಥಾನಾಯಕನೇ ಎಲ್ಲರಿಗಿಂತ ಕಿರಿಯವನು. ಲಿಯೋ ಟಾಲ್‌ಸ್ಟಾಯಿಯ ಜನನವು ೧೮೨೮ನೆಯ ಆಗಸ್ಟ್ ೨೮ನೆಯ ಸುದಿನದಲ್ಲಾಯಿತು. ಲಿಯೋವು ಜನಿಸಿದ ಒಂದೂವರೆ ವರ್ಷಗಳ ಮೇಲೆ ಎಂದರೆ ೧೮೩೦ನೆಯ ಮಾರ್ಚಿ ೭ನೆಯ ದಿನ ಮಾರ್ಯ ಎಂಬೊಂದು ಸ್ತ್ರೀ ಶಿಶುವು ಜನಿಸಿತು. ಆದರೆ ಮುಂದೆ ೫ ತಿಂಗಳು ತುಂಬುವುದರೊಳಗಾಗಿ ಆ ಪುಣ್ಯವತಿಯು ತನ್ನ ಪತಿಯನ್ನೂ ಪುತ್ರರನ್ನೂ ದುಃಖಸಮುದ್ರದಲ್ಲಿ ಮುಳುಗಿಸಿ ಪರಲೋಕಗತಳಾದಳು. ಮಾತೃವಿಯೋಗ ದುಃಖವು ಅಸಹನೀಯವಾದುದೇ ಆದರೂ, ಆಗ ಕೇವಲ ಚಿಕ್ಕ ವಯಸ್ಸಿನವರಾಗಿದ್ದ ಲಿಯೋ ಟಾಲ್‌ಸ್ಟಾಯಿಗೂ ಮಾರ್ಯಾ ಎಂಬ ಶಿಶುವಿಗೂ ಆ ದುಃಖವು ಗೋಚರವಾಗಲಿಲ್ಲ.

---

## ಅಧ್ಯಾಯ ೨ 'ಬಾಲ್ಯಾವಸ್ಥೆ-ವಿದ್ಯಾಭ್ಯಾಸ'

ಮಾತೃವಿಯೋಗ ಹೊಂದಿದ ಆ ಚಿಕ್ಕ ಮಕ್ಕಳ ಪೋಷಣೆಯು ನಿಖೊಲಸ್ ಟಾಲ್‌ಸ್ಟಾಯಿಗೆ ವಿಶೇಷ ದುಃಖಪ್ರದವಾಯಿತೆಂದು ಹೇಳಬೇಕೇನು! ಆದರೆ ಆ ಕಾರ್ಯಕ್ಕಾಗಿ ದೈವಿಕವಾಗಿಯೇ ಒಬ್ಬ ಸ್ತ್ರೀಯು ನಿಯಾಮಕಳಾಗಿದ್ದಳೆಂದು ತೋರುತ್ತದೆ. ಟಾಲ್‌ಸ್ಟಾಯ್ ಕುಟುಂಬದಲ್ಲಿ

ಅಲೆಕ್ಸಾಂಡ್ರಿಯಾ ಎರ್ಗೋಲ್‌ಸ್ಕಿ ಎಂಬ ದೂರದ ಒಬ್ಬ ಬಂಧುವು ಅನಾಥಳಾಗಿ ಬಹು ದಿನಗಳ ಹಿಂದೆಯೇ ಬಂದು ಸೇರಿದ್ದಳು. ಆ ಕನ್ಯೆಯು ಆಕರ್ಷಕ ರೂಪ ಸಂಪತ್ತಿನಿಂದಲೂ, ಉತ್ತಮ ಗುಣ ನಡತೆಗಳಿಂದಲೂ ಮನೆಯಲ್ಲಿ ಎಲ್ಲರ ಪ್ರೀತಿವಿಶ್ವಾಸಗಳಿಗೂ ಪಾತ್ರಳಾಗಿದ್ದಳು. ಕೌಂಟ್ ನಿಖೊಲಸ್ಸನ್ನು ಅವಳು ಪ್ರೀತಿಸುತ್ತಿದ್ದಳಾದರೂ, ಐಶ್ವರ್ಯಸಂಪನ್ನಳಾದ ಮೇರಿಯಾ ವಾಲ್ಕೊನ್‌ಸ್ಕಿಯನ್ನು ಮದುವೆಯಾದರೆ ಆತನ ಕುಟುಂಬ ಸ್ಥಿತಿಯು ಉತ್ತಮಗೊಳ್ಳುವದೆಂದು ಯೋಚಿಸಿ, ತಾನು ಆ ವಿವಾಹಕ್ಕೆ ಅಡ್ಡಬಾರದೆ ಬ್ರಹ್ಮಚಾರಿಣಿಯಾಗಿಯೇ ನಿಂತಳು. ಕೌಂಟನು ಮೇರಿಯಾಳನ್ನು ಮದುವೆಯಾಗಿ ಮಕ್ಕಳನ್ನು ಹೆತ್ತ ಆ ದೀರ್ಘಕಾಲದಲ್ಲೂ ಈ ತಾತಿಯಾನಳು ಮನೆಯಲ್ಲೇ ಹತ್ತು ಮಂದಿಯಲ್ಲಿ ಒಬ್ಬಳಾಗಿ ಸಂತೋಷಚಿತ್ತಳಾಗಿಯೇ ಇದ್ದುಬಿಟ್ಟಳು. ಮೇರಿಯಾಳು ಮೃತಳಾಗಿ ಆರು ವರ್ಷಗಳಾದ ತರುವಾಯ ಕೌಂಟ್ ನಿಖೊಲಸ್ಸನು ಅವಳನ್ನು ಕುರಿತು, ತನ್ನನ್ನು ಮದುವೆಯಾಗಿ ತನ್ನ ಮಕ್ಕಳಿಗೆ ತಾಯಿಯಾಗಿರೆಂದು ಅವಳನ್ನು ಕೇಳಿದನು. ಆದರೆ ತಾತಿಯಾನಳು ಅದಕ್ಕೆ ಒಪ್ಪಲಿಲ್ಲ. ಆ ಕುಟುಂಬದೊಂದಿಗೆ ತನಗೆ ಬಾಲ್ಯದಿಂದಲೂ ಬೆಳೆದು ಬಂದಿದ್ದ ಪವಿತ್ರ ಸಂಬಂಧವನ್ನು ಮಲಿನಗೊಳಿಸದೆ, ಆ ಮಕ್ಕಳಿಗೆ ಮಾತೃಸ್ಥಾನದಲ್ಲಿದ್ದು ಪೋಷಿಸಲಿಕ್ಕೆ ಮಾತ್ರ ಸಂತೋಷದಿಂದ ಒಪ್ಪಿಕೊಂಡಳು.

ಲಿಯೋವು ಮಾತೃವಿಹೀನನಾದುದು ನಿಜ. ಆದರೆ ತಾತಿಯಾನಳ ಪೋಷಣೆಯು ಒಂದು ಸುಯೋಗವು ಒದಗಿದುದರಿಂದ ಅವನಿಗೆ ಮಾತೃವಿಯೋಗದ ದುಃಖವು ಒದಗಲಿಲ್ಲ. ತಾತಿಯಾನಳಂತಹ ಸ್ತ್ರೀ ಶಿರೋಮಣಿಯು ಲೋಕದಲ್ಲಿ ಉದಯಿಸುವುದು ಅಪೂರ್ವವೆಂದು ಆತನು ಹೇಳಿದ್ದಾನೆ. ತನ್ನ ಮನಸ್ಸನ್ನೂ ನಡತೆಯನ್ನೂ ಕುದುರಿಸಿ ಒಂದು ಪಕ್ವಸ್ಥಿತಿಗೆ ತಂದವಳೇ ಆಕೆಯೆಂದು ಆತನು ಕೃತಜ್ಞತಾಪೂರ್ವಕ ಸ್ಮರಿಸಿದ್ದಾನೆ. ಸಕಲರಲ್ಲೂ ಪ್ರೀತಿವಿಶ್ವಾಸಗಳನ್ನು ಬೆಳೆಸಿ, ಅವರ ಸೇವೆಯನ್ನು ನಿಸ್ವಾರ್ಥ ಬುದ್ಧಿಯಿಂದಮಾಡಿದರೆ ಮನಸ್ಸಿಗೆ ಎಂತಹ ಆನಂದವುಂಟಾಗುತ್ತದೆಂಬುದರ ರುಚಿಯನ್ನು ತನಗೆ ತಿಳಿಸಿದ ಪುಣ್ಯಾತ್ಮಳು ತಾತಿಯಾನೆಯೇ ಎಂದು ಆತನು ಹೇಳುತ್ತಾನೆ. ಆಕೆಯು ತನ್ನ ಮೇಲೆ ಸುರಿಸಿದ ವಾತ್ಸಲ್ಯಾಮೃತದಿಂದ ತನ್ನ ಮನಸ್ಸು ಹೇಗೆ ಆನಂದಪೂರ್ಣವಾಯಿತು ಎಂದು ಆತನು ಕೃತಜ್ಞತಾಪೂ

ರ್ವಕ ಸ್ಮರಿಸಿಕೊಂಡಿದ್ದಾನೆ. ಆಕೆಯು ಸುಕೃತವಿಶೇಷದಿಂದ ತನಗೆ ಸಾಕು ತಾಯಿಯಾಗಿ ಏರ್ಪಡದಿದ್ದರೆ, ತನಗೆ ಲೋಕಜೀವಿತದ ಮರ್ಮವೇ ತಿಳಿಯದೆ, ತನ್ನ ಜೀವಿತವು ಆನಂದ ರಹಿತವಾಗಿ ಮರುಭೂಮಿಯಂತೆ ಆಗುತ್ತಿತ್ತೋ ಎಂದು ಸಂದೇಹಿಸಿದ್ದಾನೆ ಪುಷ್ಟವಾದ ಹಲವು ಗಡಿಬಿಡಿಗಳಿಗೆ ಮನಸ್ಸುಕೊಡದೆ, ಮನಃಪೂರ್ವಕವಾಗಿ - ಅಚ್ಚುಮೆಚ್ಚಾಗಿ ತನ್ನ ತನ್ನ ಮನೆಯ ಕೆಲಸಕಾರ್ಯಗಳನ್ನು ನಡೆಯಿಸಿಕೊಳ್ಳುತ್ತ ಬಂದಲ್ಲಿ ಪ್ರತಿ ಮನೆಯಲ್ಲೂ ಲಕ್ಷ್ಮಿಯು ತಾಂಡವವಾಡುತ್ತಿರುವಳು - ಸಂಸಾರವು ಸರ್ವ ಸೌಭಾಗ್ಯಪೂರ್ಣವಾಗಿ ಸುಖಮಯವಾಗಿರುವುದು ಎಂಬುದರ ಗುಟ್ಟು ಆ ಮಹಾತ್ಮಳಿಂದಲೇ ತನಗೆ ತಿಳಿಯಲು ಅವಕಾಶವಾಯಿತು ಎಂಬುದು ಆತನ ಅಭಿಪ್ರಾಯವಾಗಿದ್ದಿತು. ಆ ಪುಣ್ಯವತಿಯ ಸಾನ್ನಿಧ್ಯದಿಂದ ಟಾಲ್‌ಸ್ಟಾಯ್ ಕುಟುಂಬದಲ್ಲಿನ ಎಲ್ಲಾ ವ್ಯಕ್ತಿಗಳಲ್ಲೂ ಪರಸ್ಪರ ಪ್ರೇಮ-ವಿಶ್ವಾಸಗಳು ಲೇಶಮಾತ್ರವೂ ಕುಂದದೆ, ಆ ದೊಡ್ಡ ಕುಟುಂಬವು ಗೋಕುಲದಂತೆ ಸಮಾಧಾನದಿಂದಲೂ ಸರ್ವ ಸೌಭಾಗ್ಯದಿಂದಲೂ ಪೂರ್ಣವಾಗಿ ಕಳಕಳಿಸುತ್ತಿದ್ದಿತು.

ಲಿಯೋ ಮುಂತಾದ ನಿಕೊಲಸ್ಸನ ಮಕ್ಕಳಿಗೆ ತಾತಿಯಾನಳು ಸಮೀಪದ ಬಂಧುವಲ್ಲದಿದ್ದರೂ, ಮನೆಯಲ್ಲೇ ಇದ್ದ ಮಿಕ್ಕ ಇಬ್ಬರು ಸೋದರತ್ತೆಯರಿಗಿಂತಲೂ ಆಕೆಯ ಅಧಿಕಾರವೇ ಅವರಮೇಲೆ ಹೆಚ್ಚು ರೀತಿಯಿಂದ ನಡೆಯುತ್ತಿತ್ತು. ಅವಳೂ ಸಹ ಅವರನ್ನು ನಿಷ್ಕಲ್ಮಷ ರೀತಿಯಿಂದ ಪ್ರೀತಿಸುತ್ತ, ಅವರ ಮೇಲು-ಕೀಳುಗಳಲ್ಲಿ ಸಮಭಾಗಿನಿಯಾಗಿ ಅವರ ವಿಶೇಷವಾದ ಭಕ್ತಿವಿಶ್ವಾಸಗಳಿಗೆ ಪಾತ್ರಳಾಗಿದ್ದಳು. ಲಿಯೋವಿನ ಬಾಲ್ಯಜೀವಿತವನ್ನು ರೂಪುಗೊಳಿಸುವಲ್ಲಿ, ತಾತಿಯಾನಳು ಮಾತ್ರವಲ್ಲ, ರಸ್ಸೆಲ್ ಎಂಬೊಬ್ಬ ಅವನ ಉಪಾಧ್ಯಾಯನೂ ಕಾರಣನಾಗಿದ್ದನಂತೆ. ಸತ್ಯಪ್ರಿಯನೂ, ವಿಶ್ವಾಸಾರ್ಹನೂ, ಆಗಿದ್ದ ಆತನ ಸಹವಾಸದಿಂದಲೂ ಬೋಧನೆಯಿಂದಲೂ, ಲಿಯೋವು ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ತನಗೆ ವಿಶೇಷ ಪರಿಚಯವುಂಟಾಯಿತೆಂದೂ ತನ್ನಲ್ಲಿ ಆತ್ಮವಿಶ್ವಾಸವೂ ಮನೋದಾರ್ಢ್ಯವೂ ಉಂಟಾಗುವುದಕ್ಕೆ ಆತನ ಸಹಾಯವೂ ವಿಶೇಷ ರೀತಿಯಿಂದ ಸಹಾಯಕಾರಿಯಾಯಿತೆಂದೂ ಹೇಳಿದ್ದಾನೆ.

ಚಿಕ್ಕತನದಲ್ಲಿ ಲಿಯೋವು ಬಹು ಚಟುವಟಿಕೆಯುಳ್ಳವನೂ, ಹಸನ್ಮು

ಟಿಯೂ, ಸ್ನೇಹಪರನೂ ಸದಾ ಆಟಪಾಟಗಳಲ್ಲಿ ಅಪೇಕ್ಷೆಯುಳ್ಳವನೂ ಆಗಿದ್ದನೆಂದೂ, ತನ್ನ ಅಣ್ಣಂದಿರನ್ನೂ ತಂಗಿಯನ್ನೂ ತನ್ನ ಮೃದುಮಧುರವಾದ ಮಾತುಕಥೆಗಳಿಂದ ಸಂತೋಷಪಡಿಸುತ್ತ ಪ್ರೀತಿವಿಶ್ವಾಸಗಳಿಂದ ಅವರೊಂದಿಗೆ ಆಡಿಕೊಳ್ಳುತ್ತಲಿದ್ದನೆಂದೂ, ತಮ್ಮ ಮನೆಗೆ ಅವನು ಒಂದು ಪ್ರಕಾಶಮಾನವಾದ ನಕ್ಷತ್ರದಂತೆ ಇದ್ದನೆಂದೂ ಅವನ ತಂಗಿಯಾದ ಮಾರ್ಯಾಳು ಹೇಳಿದ್ದಾಳೆ.

ದೊಡ್ಡ ಶ್ರೀಮಂತಕುಟುಂಬವಾದ್ದರಿಂದ ಮನೆಯಲ್ಲಿ ಹಲವರು ಆಶ್ರಿತರೂ ಬಂದುಹೋಗುವ ಅತಿಥಿ ಅಭ್ಯಾಗತರೂ ಇದ್ದೇ ಇರುವರು. ತಮ್ಮ ಮನೆಯಲ್ಲಿ ಪರರಿಗೋಸ್ಕರವಾಗಿ ನಡೆಯುತ್ತಿದ್ದ ಊಟಉಪಚಾರಗಳು, ಮಾನಮರ್ಯಾದೆಗಳು ಮುಂತಾದುವುಗಳ ವಿಚಾರವಾದ ಅನುಭವಗಳು ಮಕ್ಕಳ ಎಳೆಯ ಮನಸ್ಸಿನಮೇಲೂ ಬಿದ್ದು, ಅವರಲ್ಲಿ ಸ್ವಾಭಾವಿಕವಾಗಿಯೇ ಉದಾರತೆಯೂ ಪರೋಪಕಾರಬುದ್ಧಿಯೂ ಉಂಟಾಗಲು ಅವಕಾಶವಾಗಿದ್ದಿತು. ಲಿಯೋವು ಅಲ್ಪತನ ಕ್ಷುದ್ರತನಗಳನ್ನು ಎಂದೂ ಮೆಚ್ಚದವನಾಗಿ ಅವನಲ್ಲಿ ಧೈರ್ಯ ಔದಾರ್ಯ ಗಾಂಭೀರ್ಯಗಳು ನೆಲೆಸಿರಲು ಈ ವಂಶಗೌರವವೇ ಕಾರಣವಾಯಿತು. ಹಾಗೆ ಆತನಲ್ಲಿ ಸ್ವಾಭಾವಿಕವಾಗಿಯೇ ಇದ್ದ ಆ ಗುಣವು ಸದ್ಗುಣಮಣಿಯಾದ ತಾತಿಯಾನಗಳ ಶಿಕ್ಷಣೆ - ಉದಾಹರಣೆಗಳಿಂದ ವಿಶೇಷವಾಗಿ ಬೆಳೆಯಿತು. ಚಿಕ್ಕಂದಿನ ಸುಖಸಂತೋಷಗಳ ಈ ಸುದಿನಗಳನ್ನೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳಂತೆ ನಿಶ್ಚಿಂತೆಯಿಂದಲಿದ್ದ ಆ ಕಾಲದ ಸ್ವರ್ಗಾನುಭವಗಳನ್ನೂ ಲಿಯೋವು ವೃದ್ಧನಾದಮೇಲೂ ಬಹುದಿನಗಳು ನೆನೆಸಿಕೊಳ್ಳುತ್ತಿದ್ದನು.

ಯಾಸ್ನಯಾಪಾಲ್ಯಾನಾ ಎಂಬ ಗ್ರಾಮವು ಟಾಲ್‌ಸ್ಟಾಯ್ ಮನೆತನದ ಸ್ವಗ್ರಾಮ. ಅದು ಕೌಂಟ್ ನಿಖೊಲಸ್ಸನು ಮೇರಿಯಾವಾಲ್ಕೋನ್ಸ್ಕಿಯನ್ನು ವಿವಾಹವಾದಾಗ್ಗೆ ಆಕೆಗೆ ಬಳವಳಿಯಾಗಿ ಕೊಡಲ್ಪಟ್ಟದು. ಲಿಯೋವು ಬಾಲಕನಾಗಿದ್ದಾಗ, ಈ ಹಳ್ಳಿಯಲ್ಲೂ ಎಷ್ಟೋಕಾಲ ವಾಸ ಮಾಡಿದನು. ಮನೆಯಲ್ಲಿ ಹೆತ್ತತಾಯಿಯೊಬ್ಬಳು ಇಲ್ಲದಿದ್ದರೂ, ತಾತಿಯಾನಳು ಮಿಕ್ಕ ಯಾವ ವಿಚಾರದಲ್ಲೂ ಮಕ್ಕಳಿಗೆ ಚಿಂತೆಯುಂಟಾಗದಂತೆ ಜಾಗ್ರತಳಾಗಿ ನೋಡಿಕೊಂಡು ಪೋಷಿಸುತ್ತಿದ್ದಳಾದುದರಿಂದ ಅವರು ಸುಖ

ವಾಗಿದ್ದರು. ನೆರೆಹೊರೆಯೂ ಅವನ ಮನಸ್ಸಿಗೆ ಸರ್ವದಾ ತೃಪ್ತಿಶಾಂತತೆಗಳೇ ಉಂಟಾಗುವಂತೆ ಸನ್ನಿವೇಶವನ್ನುಂಟಾಗಿದ್ದಿತು. ಹಳ್ಳಿಗಾಡಿನ ಬಡಜನರು, ತಮ್ಮ ಆಡಂಬರರಹಿತವಾದ ಜೀವನ, ತಮ್ಮ ಆರಂಬವೃತ್ತಿ, ದನಕರುಗಳ ಪಾಲನೆ, ದಂಭ ದರ್ಪ ಕಪಟವೃತ್ತಿಗಳನ್ನರಿಯದ ಸಾದಾರೀತಿಯ ಆಚರಣೆಗಳು, ಕಷ್ಟಾರ್ಜಿತವಾದ ಜೀವನ, ಪಾಪಭೀತಿ, ದೈವಭಕ್ತಿ ಮುಂತಾದುವುಗಳನ್ನುಂಟಾಗಿರುವಿಕೆ, ಇವುಗಳೆಲ್ಲವೂ ಚಿಕ್ಕವನಾದ ಲಿಯೋವಿನ ಮನಸ್ಸಿನಮೇಲೆ ಬಹು ಉತ್ತಮವಾದ ಪರಿಣಾಮಗಳನ್ನುಂಟುಮಾಡಿದುವು. ಚಿಕ್ಕತನದಲ್ಲಿ ಅವನ ಮನೋಮಯಕ್ಷೇತ್ರದಲ್ಲಿ ಜ್ಞಾತವಾಗಿಯೋ ಅಜ್ಞಾತವಾಗಿಯೋ ಉಂಟಾದ ಈ ಅನುಭವಗಳೇ ಆತನು ಮುಂದೆ ಬರೆದ ಅನೇಕ ಗ್ರಂಥಗಳಲ್ಲಿ ಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪ್ರತಿಯೊಬ್ಬನೂ ತಮ್ಮ ಸ್ವಂತ ಜೀವನದ ಮಾರ್ಗವನ್ನು ಹುಡುಕಿಕೊಂಡು ಒಬ್ಬರಿಗೂ ಅನ್ಯಾಯ ಮಾಡದೆ ಇದ್ದರೆ ಎಲ್ಲರೂ ಸುಖದಿಂದ ಇರಬಹುದು ಎಂಬ ವಿಚಾರವೂ ಆ ಚಿಕ್ಕವನ ಮನಸ್ಸಿನಲ್ಲಿ ಬೇರೂರಿತು.

ಸಮಸ್ತ ಅನುಕೂಲತೆಗಳಿಂದಲೂ ಕೂಡಿ ಸಮಾಧಾನಕರವಾಗಿದ್ದ ಮನೆ, ರಮ್ಯವಾದ ಪೈರುಪಚ್ಚೆಗಳಿಂದ ನೇತ್ರಾನಂದಕರವಾಗಿ ಕಂಗೊಳಿಸುತ್ತಿದ್ದ ಹೊಲ ಗದ್ದೆ ತೋಟಗಳು, ಕೆರೆಕಟ್ಟೆಗಳು ಹೀಗೆ ತಮ್ಮ ಸುತ್ತುಮುತ್ತಲೂ ಇದ್ದ ಸನ್ನಿವೇಶಗಳು ಮನಸ್ಸಿಗೆ ವಿಶೇಷ ಹರ್ಷವನ್ನುಂಟುಮಾಡುತ್ತಿರಲು ಲಿಯೋ ಟಾಲ್‌ಸ್ಟಾಯಿಯು ತನ್ನ ಬಾಲ್ಯವಯಸ್ಸಿನ ಏಳೆಂಟುವರ್ಷ ಕಾಲವನ್ನು ಕಳೆದನು.

ಲಿಯೋವಿಗೆ ಎಂಟುವರ್ಷ ವಯಸ್ಸಾದಾಗ, ಆ ಕುಟುಂಬವು ಮಾಸ್ಕೋಪಟ್ಟಣದಲ್ಲಿ ವಾಸವಾಗಿರಲು ಪ್ರಯಾಣಮಾಡಿದರು. ಮುಂದಿನ ವರ್ಷದ ಬೇಸಗೆಯಲ್ಲಿ ಅವನ ತಂದೆಯಾದ ನಿಕೊಲಸ್ಸನು ಮೃತನಾದನು. ತಂದೆಯ ಸಂಸ್ಕಾರವು ಪಾಲ್ಯಾನಾ ಹಳ್ಳಿಯಲ್ಲೇ ನಡೆಯಿತು. ಅದಕ್ಕೆ ಕಾರಣಾಂತರದಿಂದ ಬಾಲಕ ಲಿಯೋವು ಹೋಗಿ ಹಾಜರಿರಲು ಆಗಲಿಲ್ಲ. ಅದು ಅವನ ಮನಸ್ಸಿನಲ್ಲಿ ಬಹು ದಿನಗಳವರೆಗೆ ತಮ್ಮ ತಂದೆಯು ನಿಜವಾಗಿ ಸತ್ತೇಇಲ್ಲವೆಂಬ ಸಂದೇಹವನ್ನು ಹುಟ್ಟಿಸಿತು ಮಾಸ್ಕೋ ಪಟ್ಟಣದ ಬೀದಿಗಳಲ್ಲಿ ಯಾವನೊಬ್ಬ ಹೊಸಬನನ್ನು ಕಂಡರೆ, ಎಂದಾದರೂ ತನ್ನ ತಂದೆಯೂ

ಹಾಗೆಯೇ ಕಣ್ಣಿಗೆ ಬೀಳಬಹುದು ಎಂದುಕೊಳ್ಳುವನು. ಮುಂದೆ ಸುಮಾರು ಎಂಟೊಂಬತ್ತು ತಿಂಗಳು ಕಳೆದಮೇಲೆ ನಿಖೊಲಸ್ಸನ ತಾಯಿಯು ಪುತ್ರ ಶೋಕವನ್ನು ಸಹಿಸಲಾರದೆ ಮೃತಳಾದಳು. ಆ ಸಂದರ್ಭದಲ್ಲಿ ಆತನ ಮನಸ್ಸಿನಮೇಲೆ ಉಂಟಾದ ಪರಿಣಾಮವು ಬಹು ಭಯಂಕರವಾಗಿತ್ತೆಂದು ಆತನೇ ಹೇಳಿದ್ದಾನೆ.

ಚಿಕ್ಕಂದಿನಲ್ಲಿ ಲಿಯೋವಿನ ಬುದ್ಧಿಯು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವಂತೆ ಬಹು ತೀಕ್ಷ್ಣಪ್ರಕೃತಿಯದಾಗಿತ್ತು. ಅವನ ಯೋಚನೆ ಯಾದರೂ ದಿಕ್ಕುದೆಸೆಯಿಲ್ಲದೆ ಓಡುತ್ತಿತ್ತು. ಅವನ ವಿಚಿತ್ರ ಸ್ವಭಾವವನ್ನು ಕಂಡು ಎಲ್ಲರೂ ಪರಮಾಶ್ಚರ್ಯಗೊಳ್ಳುವರು. ಅವನು ಹಲಕೆಲವು ವೇಳೆ ತನ್ನ ಮನಸ್ಸಿಗೆ ಬಂದಂತೆ ನಡೆಯುವನು. ದೊಡ್ಡವಂಶದಲ್ಲಿ ಹುಟ್ಟಿದ ಇವನು ಸ್ವೇಚ್ಛಾಚಾರಿಯಾಗುವನೆಂದು ಎಲ್ಲರೂ ಗಾಬರಿಗೊಳ್ಳುವರು. ಮತ್ತೆ ಕೆಲವರು, ಇವನು ಬಹು ದೂರಾಲೋಚನಾಪರನೂ ಮಹತ್ಕಾರ್ಯಸಾಧಕನೂ ಆಗುವನು ಎನ್ನುವರು. ಅವನ ಬುದ್ಧಿಯು ಪಾದರಸದಂತೆ ಎಷ್ಟು ಸೂಕ್ಷ್ಮವಾಗಿದ್ದಿತೋ ಅಷ್ಟೇ ಚಪಲವಾಗಿಯೂ ಇದ್ದಿತು. ಯಾವುದೊಂದು ಕೆಲಸಮಾಡಲೂ ಅವನಿಗೆ ತಾಳ್ಮೆಯಿಲ್ಲ; ಸಮಾಧಾನವಿಲ್ಲ. ಪ್ರತಿಯೊಂದು ಕೆಲಸದಲ್ಲೂ ಆತುರ, ಅತೃಪ್ತಿ. ಯಾವ ವಿಷಯವನ್ನು ತೆಗೆದುಕೊಂಡರೂ ಸಮಗ್ರವಾಗಿ ಅಭ್ಯಾಸಮಾಡನು. ಯಾವ ಪುಸ್ತಕವನ್ನು ತೆಗೆದುಕೊಂಡರೂ ಪೂರ್ತಿ ಓದಿ ಮುಗಿಸುವವರೆಗೆ ಸಮಾಧಾನವಿಲ್ಲ. ಮನಶ್ಚಾಂಚಲ್ಯವಿಲ್ಲದೆ, ಒಂದೇ ನಿಶ್ಚಯದಿಂದ ಒಂದು ಸ್ಥಳದಲ್ಲಿ ಕುಳಿತುಕೊಳ್ಳುವುದೆಂದರೆ ಅದು ಸಹ ಅವನಿಗೆ ವಿಶೇಷ ಬೇಸರವನ್ನುಂಟುಮಾಡುವುದು. ಹಾಗೆ ಬೇಸರಬಂದಾಗ್ಗೆ ಏನು ಮಾಡುತ್ತಿದ್ದನೆಂಬುದು ಅವನಿಗೇ ತಿಳಿಯುತ್ತಿರಲಿಲ್ಲ. ಎಷ್ಟೋ ವೇಳೆ, ತನ್ನ ನಡೆವಳಿಕೆಯನ್ನು ಕುರಿತು ಹಲವು ನಿಬಂಧನೆಗಳನ್ನು ಏರ್ಪಡಿಸಿಕೊಳ್ಳುವನು. ಆದರೆ ಆ ನಿಬಂಧನೆಗಳಲ್ಲೊಂದನ್ನೂ ಅನುಸರಿಸಲಾರದೆ, ಮುಂದೆ ಎರಡು ದಿನಗಳಲ್ಲೇ ಅವುಗಳನ್ನು ತಪ್ಪಿಹಾಕಿ ಹೊಸದಾಗಿ ರಚಿಸಿಕೊಳ್ಳುವನು. ಹಾಗೆ ಒಂದು ಸಾರಿ ಅವನು ಬರೆದುಕೊಂಡ ನಿಬಂಧನೆಗಳು ಹೀಗಿದ್ದುವು.

೧. ನಾನು ಯಾವ ಕೆಲಸಮಾಡತೊಡಗುತ್ತೇನೋ ಅದನ್ನು ಎಷ್ಟು

ಅಂತರಾಯಗಳು ಬಂದರೂ ಲಕ್ಷ್ಯಮಾಡದೆ ಪೂರೈಸಬೇಕು.

೨. ಹಾಗೆ ಯಾವುದನ್ನು ಪ್ರಾರಂಭಿಸಿದರೂ ಅದನ್ನು ಚೆನ್ನಾಗಿ ಮಾಡಬೇಕು.

೩. ನನಗೆ ಯಾವ ವಿಚಾರವಾದರೂ ಮರೆತುಹೋಗಿದ್ದರೆ, ಅದನ್ನು ಜ್ಞಾಪಿಸಿಕೊಳ್ಳಲು ಪುಸ್ತಕದ ಸಹಾಯ ಕೋರದೆ, ಕೇವಲ ಮನಸ್ಸಿನಿಂದ ಯೋಚಿಸಿಯೇ ಜ್ಞಾಪಿಸಿಕೊಳ್ಳಬೇಕು.

೪. ನನ್ನ ಮನಸ್ಸು ಯಾವಾಗಲೂ ತನ್ನ ಸಂಪೂರ್ಣ ಶಕ್ತಿಯಿಂದಲೂ ಕಾರ್ಯಮಾಡುವಂತೆ ತೊಡಗಿಸಬೇಕು.

೫. ಯಾವಾಗಲೂ ಮನಸ್ಸಿನಲ್ಲೇ - ಮೌನವಾಗಿಯಲ್ಲದೆ ಗಟ್ಟಿಯಾಗಿಯೇ ಓದಬೇಕು, ಮತ್ತು ಯೋಚಿಸುವುದನ್ನೂ ಸಹ ಬಾಯಿಂದ ಸ್ಪಷ್ಟವಾಗಿ ಉಚ್ಚರಿಸಬೇಕು.

೬. ನನ್ನ ಕಾರ್ಯಕ್ಕೆ ಯಾರು ಅಂತರಾಯವನ್ನು ಉಂಟುಮಾಡುತ್ತಾರೋ ಅವರಿಗೆ, ದಾಕ್ಷಿಣ್ಯವಿಲ್ಲದೆ ಸ್ಪಷ್ಟವಾಗಿ - ನಿಮ್ಮಿಂದ ನನಗೆ ವಿಘ್ನವಾಗುತ್ತಿದೆ-ಯೆಂದು ಹೇಳುವುದು. ಅವರು ಅದಕ್ಕಾಗಿ ವ್ಯಥೆಪಡುವಂತಿದ್ದರೆ, ನನ್ನನ್ನು ಕ್ಷಮಿಸಿರಿ ಎಂದು ಕೇಳಿಕೊಳ್ಳುವುದು.

ಹೀಗೆಲ್ಲ ಆತನು ಯೋಚಿಸುವನು. ತಾನು ನ್ಯಾಯಶಾಸ್ತ್ರವನ್ನೋದಿ ಪ್ರಾವೀಣ್ಯತೆಯನ್ನು ಪಡೆಯಬೇಕೆಂದೂ, ವೈದ್ಯಶಾಸ್ತ್ರವನ್ನೋದಬೇಕೆಂದೂ, ಫ್ರೆಂಚು, ರಷ್ಯನ್, ಜರ್ಮನ್, ಇಂಗ್ಲಿಷ್, ಲ್ಯಾಟಿನ್, ಇಟ್ಯಾಲಿಯನ್ ಭಾಷೆಗಳನ್ನು ಅಭ್ಯಸಿಸಬೇಕೆಂದೂ, ವ್ಯವಸಾಯ ಶಾಸ್ತ್ರವನ್ನು ಕಲಿಯಬೇಕೆಂದೂ, ದೇಶಚರಿತ್ರೆ, ಭೂವಿವರಣೆಗಳನ್ನು ಕಲಿಯಬೇಕೆಂದೂ, ಗಣಿತಶಾಸ್ತ್ರದಲ್ಲಿ ಪ್ರವೀಣನಾಗಬೇಕೆಂದೂ, ಸಂಗೀತಶಾಸ್ತ್ರ ಮತ್ತು ಚಿತ್ರಕಲೆಗಳಲ್ಲಿ ಕುಶಲತೆಯನ್ನು ಪಡೆಯಬೇಕೆಂದೂ, ತಾನು ಯಾವುದನ್ನು ಪಠಿಸಿದರೂ ಅವುಗಳನ್ನು ಕುರಿತು ವ್ಯಾಸಗಳನ್ನು ಬರೆಯಬೇಕೆಂದೂ ಹಲವು ನಿಬಂಧನೆಗಳನ್ನು ರಚಿಸಿಕೊಂಡನು. ಒಂದು ಸಾರಿ, ತಾನು ರಚಿಸಿಕೊಂಡ ನಿಬಂಧನೆಗಳನ್ನು ಆಚರಿಸಲಾರದೆ ಅವು ಮೂಲೆಗೆ ಬಿದ್ದಮೇಲೆ ಪುನಃ ಮನಸ್ಸನ್ನು ಬಲಪಡಿಸಿಕೊಂಡು ಕೆಲವು ದಿನಗಳಮೇಲೆ ಮತ್ತೊಮ್ಮೆ ಬರೆಯುವನು.

ಆತನ ಜೀವನಚರಿತ್ರೆಯಲ್ಲಿ ಇಂತಹ ನಿಬಂಧನೆಗಳ ಹಲವು ಪಟ್ಟಿಗಳಿವೆ. ಹೀಗೆ ಆತನ ಜೀವಿತದ ಬಾಲ್ಯಾವಸ್ಥೆಯು ಎಂದರೆ ಜನನದಿಂದ ಸುಮಾರು ಹದಿನಾಲ್ಕು ವರ್ಷ ಪ್ರಾಯದವರೆಗೆ ವಿಚಿತ್ರರೀತಿಯಿಂದ ನಡೆದುಬಂದಿತು.

---

## ಅಧ್ಯಾಯ ೩ 'ಉದ್ಯೋಗ'

ಲಿಯೋ ಟಾಲ್‌ಸ್ಟಾಯಿಯ ಮನಸ್ಥಿತಿಯು ಇಷ್ಟು ಚಂಚಲವಾಗಿದ್ದಾದರೂ ತನ್ನ ಸೋದರರೊಂದಿಗೆ ಅವನು ಎಂದಿನಂತೆ ಶಾಲೆ (*College*) ಗೇನೋ ಹೋಗಿ ಅಭ್ಯಾಸಮಾಡುವುದನ್ನು ಬಿಟ್ಟಿರಲಿಲ್ಲ. ಆಗರ್ಭ ಶ್ರೀಮಂತರ ಬಳಿ ಸ್ವಾರ್ಥಸಾಧಕರಾದ ಸ್ನೇಹಿತರಿಗೆ ಕಡಮೆಯೇ? ಲಿಯೋವಿಗೆ ಸ್ವಾಭಾವಿಕವಾಗಿಯೇ ಸ್ಥಿಮಿತಬುದ್ಧಿಯಿರಲಿಲ್ಲ! ಜೊತೆಗೆ ದುಷ್ಟಸಹವಾಸವೂ ಒದಗಲು ಹಲವುಬಾರಿ ಕೆಟ್ಟದಾರಿಗೆ ಎಳೆಯಲ್ಪಡುತ್ತಿದ್ದನು. ಈ ಸನ್ನಿವೇಶದಲ್ಲಿದ್ದ ತರುಣರು ಜೂಜು, ವಿಷಯಾಸಕ್ತಿ, ಕುಡುಕತನ ಮುಂತಾದುವುಗಳಲ್ಲಿ ಮುಳುಗಿ ಹಲವುಬಗೆಯ ದುಶ್ಶೀಲಗಳಿಗೆ ವಶವಾಗಿ ಕೆಡುವುದು ಅಪೂರ್ವವಲ್ಲ. ಲಿಯೋವೂ ಅವನಿಗೆ ಮೇಲೆ ಹೇಳಿದಂತಹ ಮನಶ್ಚಾಂಚಲ್ಯವಿರದಿರುತ್ತಿದ್ದರೆ ಈ ಮಾರ್ಗದಲ್ಲೇ ಹೋಗಿ ಅಧೋಗತಿಯನ್ನು ಹೊಂದುವುದು ಆಶ್ಚರ್ಯವಾಗಿರಲಿಲ್ಲ. ಅವನ ಮನಸ್ಸಿನ ಈ ಅಶಕ್ತತೆಯು ಈ ಸಂಬಂಧದಲ್ಲಿ ಅವನಿಗೆ ಸಹಾಯಕಾರಿಯೂ ಆಯಿತೆನ್ನಬಹುದು. ಹಾಗೆ ತನ್ನ ಮನಸ್ಸು ಆ ದುರ್ವ್ಯಾಪಾರದಿಂದ ಸೆಳೆದೊಯ್ಯಲ್ಪಟ್ಟಾಗ್ಗೆ, ಅವನು ಒಡನೆ ಬೆಚ್ಚಿ ಹಿಂದಿರುಗಿ ಜಾಗ್ರತೆಗೊಂಡು, ತನ್ನ ನಡತೆಯನ್ನು ಕ್ರಮಪಡಿಸಿಕೊಳ್ಳುತ್ತಿದ್ದನಂತೆ! ಅನೇಕವೇಳೆ ತಾನೂ ತನ್ನಂತೆ ಉನ್ನತಸ್ಥಿತಿಯಲ್ಲಿರುವವರೂ ಹಲವುಬಗೆಯ ದುರಾಚಾರಗಳಿಗೆ ವಶರಾಗಿ ನರಳುತ್ತಿರುವುದಕ್ಕಾಗಿ ಅಸಹ್ಯಪಡುವನು. ಐಶ್ವರ್ಯಸಂಪನ್ನರಾದ ತನ್ನ ಅಂತಸ್ತಿನವರಲ್ಲಿ ನೆಲೆಸಿದ ಆ ದುರ್ಗುಣವನ್ನು ಹೇಗೆ ತಪ್ಪಿಸಬಹುದೆಂದು ಯೋಚಿಸಿ ಯೋಚಿಸಿ ಏನೂ ತೋರದೆ ಹತಾಶನಾಗುವನು. ತನ್ನ ಸ್ವಭಾವವು ಎಷ್ಟು ಮಟ್ಟಿಗೆ ಕೆಟ್ಟುಹೋಯಿತಲ್ಲಾ ಎಂದು ತನ್ನ ಜೀವಿತವನ್ನು ತಾನೇ ಪರಿಶೀ

ಲಿಸಿಕೊಂಡಾಗ, ತನ್ನ ವಿಷಯದಲ್ಲೇ ವಿಶೇಷ ರೋಷಗೊಂಡು, ತನ್ನನ್ನೇ ತಾನು ಕ್ರೂರವಾಗಿ ದಂಡಿಸಿಕೊಳ್ಳುವನು —ಅಯ್ಯೋ ಪಾಪ, ಬಡರೈತರು ಬೆಳಗಿನಿಂದ ಸಂಜೆಯವರೆಗೂ ಮಳೆಗಾಳಿ ಬಿಸಿಲುಗಳೆನ್ನದೆ ವ್ಯೆಮುರಿಯ ದುಡಿದು ಸಂಪಾದಿಸಿ, ತೆತ್ತ ಕಂದಾಯ ಕಾಣಿಕೆಗಳನ್ನು, ಬುದ್ಧಿವಂತರೂ ವಿದ್ಯಾವಂತರೂ ಎನಿಸಿಕೊಳ್ಳುವ ನಾವು ಪಡೆದುಕೊಂಡು, ಲೇಶಮಾತ್ರವೂ ಲಜ್ಜೆಯಿಲ್ಲದೆ ದುಷ್ಕಾರ್ಯಗಳಿಗಾಗಿ ವಿನಿಯೋಗಿಸಿ ದುಂದುಗೊಳಿಸುತ್ತಿರುವೆವಲ್ಲ - ನಾವು ಮಹಾಪಾಪಿಗಳಲ್ಲವೆ-ಎಂದು ಮರುಗುತ್ತಿದ್ದನು. ಮನಸ್ಸಿನಲ್ಲಿ ಒಂದೊಂದು ಬಾರಿಯೂ ಹೀಗೆ ತಾನುಮಾಡುವುದು ತಪ್ಪೆಂದು ತೋರುವುದು. ಅದಕ್ಕಾಗಿ ಮರುಗುವನು. ಪುನಃ ಮನಸ್ಸ್ತಿಮಿತವಿಲ್ಲದೆ ಹಾಗೆಯೇ ಮಾಡುವನು. ತನ್ನಮೇಲೆ ತಾನೇ ಕೋಪಿಸಿಕೊಂಡು ವಿಶೇಷವಾಗಿ ದೇಹ ದಂಡನೆಮಾಡಿಕೊಳ್ಳುವನು. ಹಾಗೆ ಶಿಕ್ಷೆಮಾಡಿಕೊಳ್ಳುವಾಗ ತನ್ನ ಆ ಗರ್ಭದ್ವೇಷಿಯನ್ನು ಶಿಕ್ಷಿಸುವನೋ ಎಂಬಷ್ಟುಮಟ್ಟಿಗೆ ನಿಷ್ಕರುಣಿಯಾಗಿರುವನು. ಒಂದುಸಾರಿ, ತನ್ನ ಕೈಯನ್ನು ಉದ್ದಕ್ಕೆ ಚಾಚಿ ಆ ಕೈಯಮೇಲೆ ಬಹು ಭಾರವಾದ ಒಂದು ನಿಘಂಟು ಗ್ರಂಥವನ್ನಿಟ್ಟುಕೊಂಡು, ಕೈಯು ನೋವಿನಿಂದ ಸೇದಿಹೋಗುವಂತಾದರೂ ಲಕ್ಷ್ಯಮಾಡದೆ ಕೈಯನ್ನು ದಂಡಿಸಿದನಂತೆ! ಮತ್ತೊಂದುವೇಳೆ ತನ್ನ ಕೊಠಡಿಯ ಬಾಗಿಲನ್ನು ಮುಚ್ಚಿಕೊಂಡು, ಸೊಂಟದವರೆಗಿನ ತನ್ನ ದೇಹದ ಬಟ್ಟೆಯನ್ನು ಬಿಚ್ಚಿ, ಕೊನೆಯಲ್ಲಿ ದಪ್ಪವಾದೊಂದು ಗಂಟುಹಾಕಿದ ಹಗ್ಗದಿಂದ ಮೇಮೇಲೆ ಬಾಸುಂಡೆಗಳೇಳುವಂತೆ ಅನೇಕಸಾರಿ ಹೊಡೆದುಕೊಂಡು, ನೋವು ಅಸಹನೀಯವಾಗಲು ಮಗುವಿನಂತೆ ಗೋಳಿಟ್ಟು ಅತ್ತನಂತೆ! - 'ಅಯ್ಯೋ, ನಾನು ಏನುಮಾಡಲಿ ಎಷ್ಟು ದಂಡಿಸಿಕೊಳ್ಳಲಿ. ಎಷ್ಟು ವಯಸ್ಸಾದರೂ ಹೀಗೆಯೇ ಹುಚ್ಚನಂತೆ ಇರುವೆನೋ ಏನೋ! ನನ್ನ ಮನಸ್ಸು ಹೀಗೆಯೇ ಕೆಟ್ಟದಾರಿಗೆ ನುಗ್ಗುತ್ತಲಿರುವುದಲ್ಲಾ! ಇದಕ್ಕೊಂದು ಸ್ತಿಮಿತಸ್ಥಿತಿಯುಂಟಾಗುವುದೆಂದಿಗೆ' ಎಂದು ಹಲುಬಿಕೊಳ್ಳುವನು.

ನಮ್ಮ ಕಥಾನಾಯಕನು ಈ ಒಂದು ವಿಷಯದಲ್ಲಿ ಮಾತ್ರವಲ್ಲ ಸುಖಪಡಬೇಕೆಂದು ತೋರಿದರೂ ಹಾಗೆಯೇ! ಕೆಲವುಕಾಲ ಅದರಲ್ಲೇ ಮಗ್ನನಾಗಿರುವನು. ಒಂದುಬಾರಿ, ಕಜ್ಜಾಯದಂತಹ ಒಂದು ಭಕ್ಷ್ಯವನ್ನು ತಿನ್ನ

ಬೇಕೆಂದು ಇಚ್ಛೆಯಾಯಿತಂತೆ! ಸರಿ, ಮುಂದೆ ಎರಡುದಿನಗಳವರೆಗೆ, ಮಿತಿಯಿಲ್ಲದೆ, ಹೊಟ್ಟೆಯುಬ್ಬರಿಸಿ, ಅಸಹ್ಯವೆನ್ನಿಸುವವರೆಗೂ ಅದೊಂದೇ ಭಕ್ಷ್ಯವನ್ನು ತಿಂದುಬಿಟ್ಟನಂತೆ! ಅದರಿಂದ ಉಂಟಾದ ತೊಂದರೆಯನ್ನು ಅನುಭವಿಸಿದಮೇಲೆ ಅದರ ಅಪೇಕ್ಷೆಯು ತೀರಿ, ನಿಶ್ಚಿಂತೆಯಾಯಿತಂತೆ!

ಈ ಎಲ್ಲವನ್ನೂ ನೋಡಿದರೆ ನಮಗೆ ಆತನ ಜೀವಮಾನವು ವಿಚಿತ್ರ ರೀತಿಯದೆನ್ನಿಸದಿರುವುದಿಲ್ಲ. ಆದರೆ ವಯಸ್ಸಾಗುತ್ತಾಗುತ್ತ, ಈ ಬಗೆಯ ಹಲವು ಅನುಭವಗಳು ಏಕತ್ರ ಸೇರಿ, ಅವನ ಮನಸ್ಸು ಒಂದುಬಗೆಯ ಪಕ್ವಾವಸ್ಥೆಗೆ ಬಂದಂತಾಯಿತೆಂದು ತೋರುತ್ತದೆ. ದಿನದಿನಕ್ಕೆ ನಿರೀಶ್ವರವಾದವೇ ಹೆಚ್ಚುತ್ತಾ ಸಾಗಿದ್ದ ಆ ದೇಶದಲ್ಲಿ ಆತನು ತನ್ನ ಈ ಅನುಭವಗಳ ಮೂಲಕವೇ, ಧರ್ಮಸೂಕ್ಷ್ಮವನ್ನೂ, ಆತ್ಮವಿವೇಚನೆ ಆತ್ಮೋದ್ಧಾರ ಮುಂತಾದ ಹಲವು ವಿಚಾರಗಳನ್ನೂ ಮನನಮಾಡಿಕೊಳ್ಳಲು ಅವಕಾಶವಾಯಿತು.

ಹೀಗೆ ಆತನ ಮನೋಮಯ ಕೋಶದಲ್ಲಿ ನಡೆಯುತ್ತಿದ್ದ ನಿತ್ಯ ಯುದ್ಧಗಳೊಂದಿಗೇ ಕಾಲೇಜು ವಿದ್ಯಾಭ್ಯಾಸವೂ ನಡೆದಿದ್ದಿತು. ಆತನಿಗೆ ೧೮-೧೯ನೆಯ ವಯಸ್ಸು ನಡೆಯುತ್ತಿದ್ದಾಗ, ದೇಶಚರಿತ್ರೆಯ ಅಭ್ಯಾಸವನ್ನು ಮುಗಿಸಿ ನ್ಯಾಯಶಾಸ್ತ್ರವನ್ನು ತೆಗೆದುಕೊಂಡು ಪಾಠಮಾಡಿ, ನ್ಯಾಯಶಾಸ್ತ್ರ ಭಾಗದ ಎರಡನೆಯ ವರ್ಷದ ತರಗತಿಗೆ ಸೇರಿದನು. ಮುಂದೆ ಕೆಲವು ದಿನಗಳೊಳಗೇ ಕಾಲೇಜು ವಿದ್ಯಾಭ್ಯಾಸವು ಆತನಿಗೆ ವಿಶೇಷ ಅತೃಪ್ತಿಯನ್ನುಂಟುಮಾಡಿತು. ಈ ಕಾಲದಲ್ಲೇ ಅವರ ಜಹಗೀರಿಯು ಅಣ್ಣತಮ್ಮಂದಿರೊಳಗೆ ವಿಭಾಗಿಸಲ್ಪಟ್ಟು ಲಿಯೋವಿನ ಭಾಗಕ್ಕೆ ಯಸ್ನಾಯಾ ಪಾಲ್ಯಾನಾವೂ ಮತ್ತು ನಾಲ್ಕು 'ಎಸ್ಟೇಟು'ಗಳೂ ಸೇರಿ ಒಟ್ಟು ೫೪೦೦ ಎಕರೆಗಳಷ್ಟು ಭೂಪ್ರದೇಶವೂ, ಸುಮಾರು ೩೩೦ ಗಂಡಸರು ಮತ್ತು ಆ ಸಂಖ್ಯೆಯಷ್ಟೇ ಹೆಂಗಸರು ಮಕ್ಕಳ ಪ್ರಜಾಸಂಖ್ಯೆಯೂ ಬಂದುವು. ಅವರನ್ನು ಉತ್ತಮರೀತಿಯಿಂದ ಕಾಪಾಡಬೇಕಾದ ಜವಾಬುದಾರಿಯು ತನ್ನಮೇಲಿದೆಯೆಂಬ ಭಾವನೆಯು ಆತನ ಮನಸ್ಸಿಗೆ ಬಂದು, ಆತನು ತನ್ನ ಗ್ರಾಮದಲ್ಲಿ ವಾಸಿಸಲು ಆಕರ್ಷಿಸಲ್ಪಟ್ಟನು. ಹೀಗಾಗಿ ೧೮೪೭ನೆಯ ಸಂವತ್ಸರದಲ್ಲಿ ಕಾಲೇಜಿನಲ್ಲಿ ತನ್ನ ಹೆಸರನ್ನು ಮುಂದೆ ಇಟ್ಟಿರಬೇಕಾದುದಿಲ್ಲವೆಂದು ಕೇಳಿಕೊಂಡು, ಪರೀ

ಕ್ಷೆಯು ಫಲಿತಾಂಶಕ್ಕಾಗಿ ಕೂಡ ಎದುರುನೋಡಿಕೊಂಡು ಕುಳ್ಳಿರದೆ, ಆ ವೇಳೆಗೆ ದೇಹಸ್ಥಿತಿಯೂ ಅಸೌಖ್ಯತೋರಲು, ಕೆಲವುಕಾಲ ಆಸ್ಪತ್ರೆಯಲ್ಲಿದ್ದು ಗುಣಪಡಿಸಿಕೊಂಡು, ಮಾಸ್ಕೋನಗರವನ್ನು ಬಿಟ್ಟು ಪಾಲ್ಯಾನಾ ಗ್ರಾಮಕ್ಕೆ ಹೊರಟುನಡೆದನು.

ಆಸ್ಪತ್ರೆಯಲ್ಲಿ ಅಸೌಖ್ಯದಲ್ಲಿದ್ದಾಗ ಆತನು ತನ್ನ ನಿತ್ಯದ ಆಚರಣೆಗಳನ್ನು 'ಡೈರಿ'ಯಾಗಿ ಬರೆದಿಡುವ ಪದ್ಧತಿಯನ್ನು ಪ್ರಾರಂಭಿಸಿದನೆಂದು ತಿಳಿಯಬರುತ್ತೆ. ಅದರ ಮೊದಲನೆಯ ಪುಟದಲ್ಲಿ, ಹೀಗೆಂದು ಬರೆದಿದ್ದಾನೆ.

'ಫ್ಯಾಷನಬಲ್'-ಜನರು ತಿಳಿಯುವಂತೆ ಒಂದು ಗೊತ್ತಾದ ಮಾರ್ಗವನ್ನು ಹಿಡಿದು ಸಾಗದಿರುವ ನಮ್ಮ ಈ ಧ್ಯೇಯರಹಿತ ಜೀವನಕ್ಕೆ ಮುಖ್ಯ ಕಾರಣವೇನಿರಬಹುದೆಂದು ನಾನು ಬಹುದಿನಗಳಿಂದ ಯೋಚಿಸುತ್ತಿದ್ದುದು ನನಗೆ ಈಗ ಅದು ಸ್ಪಷ್ಟರೀತಿಯಿಂದ ಗೋಚರವಾಯಿತು. ಚಿಕ್ಕವಯಸ್ಸಿನಲ್ಲೂ ತಾರುಣ್ಯಾವಸ್ಥೆಯಲ್ಲೂ ನಮ್ಮವರಲ್ಲಿ ವ್ಯಾಪಿಸಿರುವ ನಾಸ್ತಿಕತೆಯು - ನಿರೀಶ್ವರಭಾವದ ಫಲವೇ ಇದೆಂದು ನನ್ನ ಮನಸ್ಸಿಗೆ ನಿಶ್ಚಯವಾಗಿದೆ. ಏಕಾಂತವಾಸವು ಬಹುಮಟ್ಟಿಗೆ ಮನುಷ್ಯನಿಗೆ ಒಂದು ಧ್ಯೇಯಯುಕ್ತ ಜೀವನವನ್ನು ತಂದುಕೊಡಲು ಸಹಾಯಮಾಡುವುದು.—ಆತ್ಮಜ್ಞಾನ ಸಂಬಂಧವಾದ ಹತ್ತು ಗ್ರಂಥಗಳನ್ನು ಬರೆಯುವುದಕ್ಕಿಂತಲೂ, ಒಂದು ಚಿಕ್ಕ ನೀತಿವಾಕ್ಯವನ್ನು ಅಭ್ಯಾಸಕ್ಕೆ ತರುವುದು ಶ್ರೇಷ್ಠವಾದುದೆಂದು ನನಗೆ ಮನವರಿಕೆಯಾಗಿದೆ.'

ಸ್ತ್ರೀಯರೊಂದಿಗೆ ಸಾಮಾಜಿಕ ಜೀವನದಲ್ಲಿ ಧಾರಾಳವಾಗಿ ಬೆರೆಯುವ ಆಧುನಿಕ ಪದ್ಧತಿಯು ಆತನಿಗೆ ಸಮ್ಮತವಿರಲಿಲ್ಲ ಹಾಗೆ ಬೆರೆಯುವುದರಿಂದ ಪುರುಷನ ಧ್ಯೇಯಯುಕ್ತ ಜೀವನಕ್ಕೆ ಹಾನಿ ಬಂದು ಅವನು ದುರ್ಬಲನೂ, ಚಂಚಲ ಮನೋವೃತ್ತಿಯವನೂ, ಕಾಮಿಯೂ ಆಗಿ ಕೆಟ್ಟುಹೋಗುತ್ತಾನೆ ಎಂದು ಆತನು ಅಭಿಪ್ರಾಯಪಟ್ಟಿದ್ದಾನೆ.

ಆತನು ತನ್ನ ಕಾಲೇಜು ವಿದ್ಯಾಭ್ಯಾಸವನ್ನು ಸಾಕುಮಾಡಿ ಗ್ರಾಮವಾಸವನ್ನು ಮೆಚ್ಚಿಕೊಂಡು, ತನ್ನ ಪೋಷಕಮಾತೆಯಾದ ತಾತಿಯಾನಾಳೊಂದಿಗೆ ಪಾಲ್ಯಾನಾದಲ್ಲಿ ವಾಸಿಸಲು ಬಂದು ನಿಂತಾಗ ತನ್ನ ಮನೋಭಾವವು ಹೇಗಿತ್ತೆಂಬುದನ್ನು ಹೀಗೆ ಬರೆದಿದ್ದಾನೆ.

'ನನ್ನ ಪಾಲಿಗೆ ಬಂದಿರುವ ಸುಮಾರು ಏಳುನೂರುಮಂದಿ ಮಾನವ ಪ್ರಾಣಿಗಳ ಕ್ಷೇಮ ಚಿಂತನೆಯನ್ನು ಗಮನಿಸುವುದು ನನ್ನ ಅತಿ ಮುಖ್ಯವಾದ ಪವಿತ್ರ ಕರ್ತವ್ಯವಾಗಿಲ್ಲವೆ ? ಇವುಗಳಿಗಾಗಿ ನಾನು ಭಗವಂತನಲ್ಲಿ ಉತ್ತರ ವಾದಿಯಾಗಿರುವೆನಲ್ಲವೆ ? ನಾನು ಸುಖಜೀವನಕ್ಕಾಗಿ ಆಸೆಪಟ್ಟು ನಗರಗ ಳಲ್ಲಿ ವಾಸಿಸಿ ಮೆರೆಯುತ್ತಿದ್ದು, ಅವರ ಮೇಲ್ವಿಚಾರಣೆಯನ್ನು ಕೆಲವುಂದಿ ನಿಷ್ಕರುಣಿಗಳಾದ ಅಧಿಕಾರಿಗಳಿಗೆ ವಹಿಸುವುದು ನ್ಯಾಯವಲ್ಲ. ನನಗೆ ಇಲ್ಲಿ ಅವರ ಯೋಗಕ್ಷೇಮವನ್ನು ಗಮನಿಸಿ, ಅವರಿಗೆ ಸರ್ವವಿಧದಿಂದಲೂ ಸುಖಸಂತೋಷಗಳನ್ನುಂಟುಮಾಡುವ ಪವಿತ್ರವಾದ ಸೇವಾಕಾರ್ಯವು ಸಿದ್ಧವಾಗಿರುವಲ್ಲಿ, ಅದನ್ನು ಬಿಟ್ಟು ನಾನು ಮತ್ತಾವ ಲೋಕಸೇವಾ ಮಾ ರ್ಗವನ್ನು ಹುಡುಕುವುದು ಯೋಗ್ಯವಾದೀತು ?''

ಹೀಗೆ ತನ್ನ ಜೀವಿತದ ನಿಶ್ಚಯೋದ್ದೇಶವನ್ನು ಕುರಿತು ಆಗಾಗ್ಗೆ ಯೋಚಿಸುತ್ತಿದ್ದನಾದರೂ, ಸ್ವಾಭಾವಿಕವಾದ ಆತನ ಮನಸ್ಸಿನ ಚಾಂಚ ಲ್ಯ ಸ್ವಭಾವವು ಇನ್ನೂ ಒಂದು ಸ್ತಿಮಿತಕ್ಕೆ ಬಂದಿರಲಿಲ್ಲ. ಮಾರನೆಯ ವರ್ಷ ಪುನಃ ಮಾಸ್ಕೋವಿಗೆ ಪ್ರಯಾಣಮಾಡಿ, ಅಲ್ಲಿ ನಾಲ್ಕಾರು ತಿಂಗಳು ಮನಬಂದಂತೆ ಇದ್ದು ವ್ಯರ್ಥಕಾಲಕ್ಷೇಪ ಮಾಡಿದನು. ಪುನಃ ವಿಶ್ವವಿದ್ಯಾ ನಿಲಯವನ್ನು ಸೇರಿ ೧೮೪೮ನೆಯ ವರ್ಷದಲ್ಲಿ ಪೀಟರ್ಸ್‌ಬರ್ಗ್ ಯೂನಿವ ರ್ಸಿಟಿಯ ಕ್ರಿಮಿನಲ್ ಮತ್ತು ಸಿವಿಲ್ ಲಾಗಳಲ್ಲಿ ತೇರ್ಗಡೆಹೊಂದಿದನು.

ಈ ಕಾಲದಲ್ಲಿ ಆತನು ಬರೆದಿಟ್ಟಿರುವ ದಿನಚರಿಯಲ್ಲಿ, ಆತನಲ್ಲಿ ನೀತಿ ಮತ್ತತೆಯು ಬಹುಮಟ್ಟಿಗೆ ಕುಗ್ಗಿಹೋಗಿ ಆತನು ಕೇವಲ ಪಶುಜೀವನ ವನ್ನು ಸಾಗಿಸುತ್ತಿದ್ದನೆಂದೂ, ಜೂಜು ಮುಂತಾದ ಆಟಗಳ ಕಾರಣವಾಗಿ ಸುಮಾರು ನಾಲ್ಕು ಸಾವಿರದವರೆಗೆ ಸಾಲವಾಗಿ ಅದು ಬೇರೆ ತಲೆಯಮೇಲೆ ಭಾರವಾಗಿ ಕುಳಿತಿತ್ತೆಂದೂ ಹೇಳಿಕೊಂಡಿದ್ದಾನೆ. ಆ ಸಂದರ್ಭದಲ್ಲಿ ಮನ ಸ್ಸು ತನಗೆ ಯಾವ ಮಾರ್ಗವೆಂದು ನಿರ್ಧರಿಸಲಾರದೆ ತಲ್ಲಣಿಸುತ್ತಿತ್ತಂತೆ ! ಮದುವೆಮಾಡಿಕೊಂಡು ಒಂದು ಸ್ಥಿರ ಜೀವನವನ್ನು ಕಲ್ಪಿಸಿಕೊಳ್ಳಬೇ ಕೆಂದು ಇಚ್ಛೆಯಾಯಿತು. ಕಾಲಬಂದರೆ ತಾನೇ ನಡೆಯುವುದು ಎಂದ್ರ ಯೋಚಿಸಿ, ಆ ಪ್ರಯತ್ನವನ್ನೂ ಬಿಟ್ಟುಬಿಟ್ಟನು. ಸರ್ಕಾರಿಯ ನೌಕರಿ ಗೊಂದಕ್ಕೆ ಸೇರಬೇಕೆಂದು ಇಚ್ಛೆಯಾಯಿತು. ಏನುಕಾರಣವೋ ಅದೂ

ಸರಿತೋರಲಿಲ್ಲ. ಹೀಗೇ ಮನಸ್ಸು ಡೋಲಾಯಮಾನವಾಗಿರುತ್ತಿರುವಲ್ಲಿ, ೧೮೫೧ರಲ್ಲಿ ಕಾಕಸಸ್ ಪರ್ವತ ಪ್ರಾಂತಗಳಲ್ಲಿ ದಂಗೆ ನಡೆದು ಅದನ್ನು ಅಡಗಿಸುವುದಕ್ಕಾಗಿ ರಷ್ಯಾ ಸರ್ಕಾರದ ಸೈನ್ಯಗಳು ಹೊರಟವು. ತನ್ನ ಸುತ್ತುಮುತ್ತಲಿನ ಈ ಸ್ಥಳದಿಂದ ಕೆಲಕಾಲ ಬೇರೆಯಾಗಿದ್ದರಾದರೂ ತನ್ನ ಮನಸ್ಸಿಗೆ ಒಂದು ಬಗೆಯ ಶಾಂತಿಯುಂಟಾದೀತೋ ಎಂದು ಯೋಚಿಸಿ, ಸೈನ್ಯದಲ್ಲಿ ಅಧಿಕಾರಿಯಾಗಿದ್ದ ತನ್ನ ಅಣ್ಣನೊಂದಿಗೆ, ಅಲ್ಲಿಗೆ ಪ್ರಯಾಣಮಾಡಲು ನಿಶ್ಚಯಿಸಿದನು.

ಅಣ್ಣತಮ್ಮಂದಿರಿಬ್ಬರೂ ವಿಶೇಷ ಉತ್ಸಾಹವಂತರಾಗಿ ಪ್ರಯಾಣಮಾಡಿ ಯುದ್ಧರಂಗದ ಬಳಿಯಲ್ಲಿದ್ದ ಸೈನ್ಯದ ಠಾಣ್ಯಕ್ಕೆ ಬಂದುಸೇರಿದರು. ಮುಂದೆ ಒಂದು ವಾರದೊಳಗಾಗಿ ಅಣ್ಣನು ಮೊದಲೇ ಏರ್ಪಾಡಾಗಿದ್ದ ಸ್ಥಳಕ್ಕೆ ಯುದ್ಧಕಾರ್ಯಕ್ಕಾಗಿ ಪ್ರಯಾಣಮಾಡಿಬಿಟ್ಟನು. ಬಿಡಾರದಲ್ಲಿ ಲಿಯೋ ಟಾಲ್‌ಸ್ಟಾಯೊಬ್ಬನೇ ನಿಂತನು. ಏಕಾಂಗಿಯಾಗಿ ನಿಂತ ಲಿಯೋವು, ತನ್ನ ನೋಟವನ್ನು ಕಾಕಸಸ್ ಪರ್ವತಗಳ ಕಡೆಗೆ ತಿರುಗಿಸಿದನು. ಆ ಪರ್ವತಮಾಲೆಯ ಪ್ರಕೃತಿಸೌಂದರ್ಯವು ಅವನ ಮನಸ್ಸನ್ನು ಸೂರೆಗೊಂಡಿತು. ಭಗವಂತನ ಅದ್ಭುತಸೃಷ್ಟಿ ವೈಚಿತ್ರ್ಯವನ್ನು ಕಂಡು ಆತನ ಮನಸ್ಸು ಬಹು ಉನ್ನತಸ್ಥಿತಿಗೇರಿದಂತೆ ಆಯಿತು. ಅಲ್ಲಿಯ ಉಷ್ಣೋದಕದ ಬುಗ್ಗೆಗಳು, ಕಡಿದಾದ ಕೋಡುಗಲ್ಲುಗಳು, ಸಾನುಪ್ರದೇಶಗಳು, ಸಾಯಂಕಾಲ ಪ್ರಾತಃಕಾಲಗಳಲ್ಲಿ ಶುಭ್ರವಾದ ಬಿಳುಪಾಗಿ ಅದೊಂದುಬಗೆಯ ಅವರ್ಣನೀಯ ಶೋಭೆಯಿಂದ ಗುಡ್ಡಗಳ ಮೇಲ್ಭಾಗದಲ್ಲಿ ಮುಸುಕಿರುತ್ತಿದ್ದ ಆ ಬಿಸಿನೀರಿನ ಊಟೆಗಳಿಂದ ಹೊರಟ ಹಬೆ, ಗಭೀರ ಗಿರಿಕಂದರಗಳು, ನಿಬಿಡವಾದ ಮರಗಿಡಗಳಿಂದ ತುಂಬಿದ ತಪ್ಪಲುಗಳು, ಇವುಗಳನ್ನೆಲ್ಲ ನೋಡಿ, ಅವನ ಮನಸ್ಸಿನಲ್ಲಿ ಉಂಟಾಗಿದ್ದ ಬೇಸರವು ಕಳೆದು ಬಹು ಉತ್ಸಾಹ ಉಂಟಾಯಿತು. ಸೃಷ್ಟಿಸೌಂದರ್ಯಕ್ಕೆ ತೌರುಮನೆಯಾದ ಆ ಪ್ರದೇಶದಲ್ಲೇ ವಾಸಮಾಡಿದರೆ ತನಗೆ ಮನೋವಿಕಾಸವುಂಟಾಗಿ, ನಿರತಿಶಯವಾದ ಆನಂದವು ಸುಖವಾಗಿ ಕರಗತವಾಗುವುದೆಂದುಕೊಂಡನು.

ಮನಸ್ಸು ಹೀಗೆ ಪ್ರಕೃತಿ ಸೌಂದರ್ಯದಿಂದ ಮೋಹಿತವಾಗಿದ್ದುದು ಕೇವಲ ಸ್ವಲ್ಪಕಾಲಮಾತ್ರ! ಸ್ವಾಭಾವಿಕವಾದ ಅವನ ಮನಶ್ಚಾಂಚಲ್ಯವು

ಪುನಃ ಅವನನ್ನು ಆವರಿಸಿತು. ಸೈನಿಕರು ಆಡುತ್ತಿದ್ದ ವಿನೋದಕರ ಆಟಗಳಲ್ಲಿ ಮನಸ್ಸು ಬೆರೆಯಿತು. ಕುಡಿತ ಕುಣಿತಾದಿ ಸ್ವೇಚ್ಛಾಚಾರಗಳಲ್ಲಿ ಮನಸ್ಸು ಲೀನವಾಗಿ ಸೂರೆಹೋಯಿತು. ತಾನು ಹಾಗೆ ಮಾಡಬೇಕು, ತನ್ನ ಜೀವನವನ್ನು ಹೀಗೆ ನಡೆಸಿಕೊಳ್ಳಬೇಕು ಎಂದು ಮಾಡಿಕೊಂಡಿದ್ದ ಪ್ರತಿಜ್ಞೆಗಳೆಲ್ಲವೂ ಬೂದಿಯಲ್ಲಿ ಮಾಡಿದ ಹೋಮದಂತೆ ನಿಷ್ಫಲವಾದುವು. ಆಗ ಆತನು ನಡೆವ ದುರ್ಮಾರ್ಗತನವನ್ನು ತರುವಾಯ ಕೇವಲ ಪರಿತಾಪದಿಂದ ತಾನೇ ಒಂದೆಡೆಯಲ್ಲಿ ಹೀಗೆಂದು ಬರೆದುಕೊಂಡಿದ್ದಾನೆ.—'ಹದಿನಾಲ್ಕನೆಯ ವಯಸ್ಸಿನಿಂದ ನನ್ನ ಇಳನೆಯ ವಯಸ್ಸಿನವರೆಗೆ ನಾನು ಕಳೆದ ರೀತಿಯನ್ನು ನೆನೆಸಿಕೊಂಡರೆ, ನನಗೇ ಎದೆಯು ಒಡೆದುಹೋಗುವಂತೆ ನಾಚಿಕೆಯೂ, ತಲೆಯು ಬಿರಿದು ಹೋಗುವಂತೆ ವ್ಯಾಕುಲವೂ ಉಂಟಾಗುತ್ತವೆ ಅಕ್ಕಟಾ, ಅದೇನು ಮನೋವ್ಯಥೆ, ಎಷ್ಟುಬಾರಿ, ನಾನು ಮಾಡಿಕೊಂಡ ಪ್ರತಿಜ್ಞೆಗಳನ್ನು ಮೀರಿ ನಡೆಯುವುದು. ಅದೆಂತಹ ಅನೀತಿಯ ಜೀವನ, ಅವೇನು ಕುಡಿತ ಕುಣಿತಗಳು, ಜೂಜಾಟ, ನಾಚಿಕೆಗೇಡಿತನ. ನಾನು ಒಳ್ಳೆಯ ರೀತಿಯಿಂದಲೂ, ನೀತಿಯುತ ಮಾರ್ಗದಲ್ಲಿಯೂ ನಡೆಯಬೇಕೆಂದು ಪ್ರಯತ್ನಿಸಿದಾಗಲೆಲ್ಲ, ನನ್ನ ವಿಷಯದಲ್ಲಿ ಇತರರ ತಿರಸ್ಕಾರವೆಷ್ಟು, ಅಸಹನೆಗಳೆಷ್ಟು! ನಾನು ಎಂದು ಅವರೊಡನೆ, ಕುಡಿತವ್ಯಭಿಚಾರ, ಜೂಜು, ಬೇಟೆ ಮುಂತಾದುವುಗಳಲ್ಲಿ ಬೆರೆನು, ವ್ಯಭಿಚಾರಿತವನಂತೆ ಇದ್ದೆನಾದರೆ, ಅಂದು ಅದೇನು ಆ ಜನರ ಹೊಗಳಿಕೆ, ಎಷ್ಟುಮಟ್ಟಿಗೆ ನನ್ನನ್ನು ಭೂಷಿಸುವಿಕೆ, ಗೌರವಿಸುವಿಕೆ! ನರಕದಲ್ಲಿನ ಹುಳುವಿನಂತೆ ಅಂತಹ ಹೀನಸ್ಥಿತಿಯಲ್ಲಿದ್ದರೂ ನಾನೇನೋ ಮಹಾಪ್ರಾಜ್ಞನೆಂದೂ ಸಂಯಮಿಯೆಂದೂ ಬಹುನಿಯತ ಮಾರ್ಗದಿಂದ ನಡೆಯುತಕ್ಕ ಮಹಾ ನೀತಿವಂತನೆಂದೂ ಹೊಗಳಿಕೆಗೆ ಪಾತ್ರನಾಗುವುದೇನು! - ಅಕ್ಕಟಾ, ಈ ಯುದ್ಧಗಳಲ್ಲಿ ನಿಷ್ಕಾರಣವಾಗಿ ಎಷ್ಟು ಜನಗಳ ತಲೆಗಳನ್ನು ಚೆಂಡಾಡಿದೆನಲ್ಲಾ! ವಿನೋದವೆಂದು ಬೇಟೆಯಲ್ಲಿ ಎಷ್ಟು ಮೃಗಗಳನ್ನು - ಪಾಪ, ಸಾಧುಪ್ರಾಣಿಗಳನ್ನು ಹಿಂಸಿಸಿ ಕೊಂದು ನಲಿದಾಡಿದೆನಲ್ಲ! ನನ್ನಾ ಕೊಲೆಗಡಿಗತನಕ್ಕೆ ಪ್ರತಿಯಾಗಿ ಯಾರಾದರೂ ಮಾತನಾಡಿದರೆ ಅವರೊಂದಿಗೆ, ಎಷ್ಟು ಅಸಹನೆ, ಕೋಪ, ಜಗಳ? ಹತವಿಧಿಯೇ! ಅದೆಂತಹ ಜೊತೆಗಾರರು, ಅದೇನು ಜೂಜಾಟ, ಅದಕ್ಕಾಗಿ

ಕಷ್ಟಪಟ್ಟು ಗಳಿಸಿದ ಎಷ್ಟು ಹಣವನ್ನು ಸೂರೆಮಾಡುವುದು. ಅಯ್ಯೋ! ನನ್ನ ಆ ಬಡ ರೈತಜನರು ಮೈಮುರಿದು ಕಷ್ಟಪಟ್ಟು ಗಳಿಸಿದ ದ್ರವ್ಯವನ್ನು ಮೂರ್ಖನಾದ ನಾನು ದುರಭ್ಯಾಸಗಳಿಗಾಗಿ ದುಂದುವೆಚ್ಚದಿಂದ ಸೂರೆ ಮಾಡಿ ಬಿಟ್ಟೆನಲ್ಲಾ! ನನ್ನ ದುರಾಗ್ರಹಕ್ಕೆ ಗುರಿಯಾಗಿ ಹಿಂಸೆಗೊಳಗಾದವರು ಎಷ್ಟುಮಂದಿ! ನನ್ನಿಂದ ಮೋಸಹೋದವರೆಷ್ಟುಮಂದಿ! ಎಷ್ಟು ಸುಳ್ಳು, ವಂಚನೆ, ಮೋಸ, ಕುಡಿತ, ವ್ಯಭಿಚಾರ, ಪರಹಿಂಸೆ, ಕೊಲೆಪಾತಕತನ! ಅಕ್ಕಟಾ, ನನ್ನೀ ಹೊಲೆಜನ್ಮವು ಏತಕ್ಕಾಗಿ ಇನ್ನೂ ಈ ಭೂಮಿಯ ಮೇಲಿದ್ದೀತು? ನನ್ನ ಆಯುಸ್ಸಿನಲ್ಲಿ ಕಳೆದ ಈ ಕಾಲವನ್ನು ಪುನಃ ಸಂಪಾದಿಸಲು ಸಾಧ್ಯವೇ? ಅಯ್ಯೋ ಘೋರಪಾಪಿಯಾದ ನಾನು ನನ್ನೀ ಅಮೌಲ್ಯಜೀವಿತವನ್ನು ವ್ಯರ್ಥಗೊಳಿಸಿದೆನಲ್ಲಾ!' ಎಂದು ತನ್ನನ್ನೇ ತಾನು ಎಷ್ಟೋ ಬಗೆಯಲ್ಲಿ ದೂಷಿಸಿಕೊಂಡು, ತನ್ನ ನಡತೆಗಾಗಿ ಅಸಹ್ಯಪಟ್ಟಿದ್ದಾನೆ.

ಆತನ ಮನಸ್ಸು, ಕಾಮಕ್ರೋಧಾದಿಗಳ ವಶವಾಗಿ ತನ್ನಿಂದ ನಡೆದು ಹೋದ ಇಂತಹ ಹಲವು ಅಸಹ್ಯಕೃತ್ಯಗಳಿಗಾಗಿ ಎಷ್ಟು ನೊಂದುಕೊಂಡಿತೆಂದು, ಇದರಿಂದ ತಿಳಿಯಬರುತ್ತದೆ. ತನ್ನಿಂದ ತರುವಾಯ ರಚಿತವಾದ ಬಾಲ್ಯವಾದ (*Childhood*) ಎಂಬ ಗ್ರಂಥದಲ್ಲಿ ತನ್ನ ಮನಸ್ಸಿನ ವ್ಯಾಕುಲವನ್ನು ವರ್ಣಿಸುವ ಹಲವು ಸ್ಥಿತಿಗಳನ್ನು ಕುರಿತು,—'ಅಯ್ಯೋ, ಇದೇನು ಜನಗಳ ಈ ಹುಚ್ಚುತನ, ಇದೆಂತಹ ಅಜ್ಞಾನ. ಒಬ್ಬನನ್ನು ಮತ್ತೊಬ್ಬನು ಕೊಲ್ಲುವುದಂತೆ! ಅದರಿಂದ ಏನೋ ಹಿರಿಯತನ - ದೊಡ್ಡಸ್ತಿಕೆ ಪ್ರಾಪ್ತವಾಯಿತೆಂದು ಹಿಗ್ಗುವುದಂತೆ! ಈ ಅಸಹ್ಯಕೃತ್ಯಕ್ಕಾಗಿ ಮರುಗದೆ ಹಿಗ್ಗುವುದೇ? ಇಂತಹ ಅನೀತಿಮಯ ಕಾರ್ಯವನ್ನು ಕಂಡು ಜನರು ಯೋಚಿಸುವುದೇ ಇಲ್ಲವಲ್ಲ - ಇದೇನಾಶ್ಚರ್ಯ? ನಾನು ನನ್ನೀ ಚಂಡಾಲಜೀವನದಲ್ಲಿ ಮಾಡದಿರುವ ದುಷ್ಕೃತ್ಯವಿಲ್ಲ. ಆದರೂ, ನನ್ನನ್ನು ಮಹಾ ನೀತಿವಂತನೆಂದು ಹೊಗಳುತ್ತಿರುವರಲ್ಲಾ - ಇದೆಂತಹ ನೀತಿ! ಇದೇನು ಲೋಕದ ವಿಚಿತ್ರಗತಿ' ಹೀಗೆಂದು ಬರೆದಿದ್ದಾನೆ.

ಆ ಕಾಲದಲ್ಲೇ ಆತನ ಗ್ರಂಥರಚನೆಗೂ ಆರಂಭವಾಯಿತು. ಆಗ ಬರೆದ ಗ್ರಂಥಗಳೆಲ್ಲವೂ, ಈ ಬಗೆಯ ಕಾಮಕ್ರೋಧಾದಿಗಳ ವಿಷಯ ಸುಖಾದಿಗಳ ವರ್ಣನೆ ಮುಂತಾದ ಹಲವು ಅಸಹ್ಯ ವಿಚಾರಗಳಲ್ಲೇ ತುಂಬಿ

ಹೋಗಿದ್ದನಂತೆ! ಎಷ್ಟೋ ಸಂದರ್ಭಗಳಲ್ಲಿ ಸತ್ಯವನ್ನು ಮುಚ್ಚಿಟ್ಟು, ಅಸತ್ಯವನ್ನೇ ಅಗಾಧವೆಂಬಂತೆ ವರ್ಣಿಸಿದನು. ಅದನ್ನು ನೋಡಿ ಹಲವರು ಆವನು ಅಗಾಧ ಪ್ರಜ್ಞಾಶಾಲಿಯೆಂದೂ, ಕಲಾಪ್ರತಿಭೆಯುಳ್ಳ ತತ್ವಜ್ಞನೆಂದೂ ಹೊಗಳಿದರು. ಆದರೆ ಲಿಯೋ ಟಾಲ್ಸ್ಟಾಯಿಯೋ ಈ ಹೊಗಳಿಕೆಗೆ ಏನೂ ಅರ್ಥವಿಲ್ಲವೆಂದೂ, ತಾನು ಮಹಾಪಾಪಿಯೆಂದೂ, ತನ್ನ ವಿಷಯದಲ್ಲಿ ಬಾಯಿಂದ ಉಚ್ಚರಿಸಲಾಗದಷ್ಟು ಅಸಹ್ಯಗೊಳ್ಳುತ್ತಿದ್ದನು. ಈ ಮಧ್ಯೆ ಪುನಃ ಕ್ರಿಮಿಯಾ ಎಂಬಲ್ಲಿ ಯುದ್ಧವೊಂದು ನಡೆಯಿತು. ಅದರಲ್ಲಿ ಸೇರಿ, ಲಿಯೋವು ಭಯಂಕರ ನರಹತ್ಯಮಾಡಿದನು. ಎಷ್ಟೋಮಂದಿ ಸೈನಿಕರನ್ನು ಆಹುತಿಗೊಂಡನು. ರಣಕ್ಷೇತ್ರದಲ್ಲಿನ ರೋಷಾವೇಶವು ಇಳಿಯಿತೆಂದೊಡನೆಯೇ, ಅಗಾಧ ಪಶ್ಚಾತ್ತಾಪಗೊಂಡು, ತನ್ನನ್ನೇ ತಾನು ಎಷ್ಟೋ ಬಗೆಯಲ್ಲಿ ಹಳಿದುಕೊಂಡನು.

ಕೊನೆಗೆ ಯುದ್ಧವೆಂಬುದು ಬಹು ಅಸಹ್ಯಕೃತ್ಯವೆಂದು ಮನಸ್ಸಿಗೆ ತೋರಿತು. ಸೈನ್ಯದಲ್ಲಿ ಜನರ ಮತ್ತು ಅಧಿಕಾರಿಗಳ ನೀತಿ ನಡತೆಗಳು ಆತನಿಗೆ ಬಹು ಅಸಹ್ಯವೆನ್ನಿಸಿದುವು. ಮನಸ್ಸಿಗೆ ಬಹು ಜಿಗುಪ್ಸೆತೋರಿತು. ಒಡನೆ ಮುಂದೆ ಅಲ್ಲಿರಲು ಹೇಸಿ, ಸೈನ್ಯದಲ್ಲಿ ತನ್ನಾ ಕೆಲಸಕ್ಕೆ ರಾಜಿನಾಮೆ ಕೊಟ್ಟು, ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್ ನಗರಕ್ಕೆ ಬಂದನು. ಅಲ್ಲಿಗೆ ಬಂದೊಡನೆ, ಆತನನ್ನು ಹಲವರು ಗ್ರಂಥಕಾರರು ಸಂಧಿಸಿ, ಅಭಿನಂದಿಸಿದರು. ಗ್ರಂಥಲೇಖಕರು ಶ್ರೇಷ್ಠಜೀವಿಗಳೆಂದೂ, ಜನಾಂಗಕ್ಕೆ ಬೋಧಕಸ್ಥಾನದಲ್ಲಿರುವ ಆವರು ಮಿಕ್ಕ ಮಾನವ ಪ್ರಾಣಿಗಳಿಗಿಂತ ಉನ್ನತ ಶ್ರೇಣಿಯಲ್ಲಿರುವರೆಂದೂ ಹೊಗಳಿ, ಆತನ ಆವರೆಗಿನ ಕಾರ್ಯಗಳಿಗಾಗಿ ಬಹೂಕರಿಸಿದರು. ಆದನ್ನೆಲ್ಲ ಕುರಿತು ಮನಸ್ಸಿನಲ್ಲಿ, ತಾನು ಬಹು ಘನವಂತನೆಂಬ ಭಾವನೆಯೂ, ತಾನು ಬರೆಯುತ್ತಿದ್ದುದೇ ಉತ್ಕೃಷ್ಟವಾದುದೆಂಬ ಭಾವನೆಯೂ, ಕೆಲವು ದಿನಗಳವರೆಗೆ ಉಂಟಾಗಿದ್ದಿತಂತೆ!

ಗ್ರಂಥರಚನಾ ರೂಪದಿಂದ ತಾನು ಅಗಾಧಕಾರ್ಯ ಮಾಡಿದ್ದೇನೆಂಬ ಹೆಮ್ಮೆಯು ಮನಸ್ಸನ್ನು ಕೆಲವುದಿನಗಳವರೆಗೆ ಆವರಿಸಿದ್ದಿತು. ಮುಂದೆ ಕೆಲಕಾಲ ರಾಜ್ಯಾಡಳಿತವು ಹೇಗೆ ನಡೆಯುತ್ತಿರುವುದೋ ತಿಳಿಯಬೇಕೆಂದೆನ್ನಿಸಿತು. ಆ ರಾಜಧಾನಿಯಲ್ಲಿನ ಹಲವುಮಂದಿ ಅಧಿಕಾರಿಗಳ ಪರಿಚಯ

ಗೊಂಡು, ಅವರು ರಾಜ್ಯಾಡಳಿತ ವಿಚಾರದಲ್ಲಿ ಅನುಸರಿಸುವ ರೀತಿ ನೀತಿಗಳನ್ನು ಪರಿಶೀಲಿಸತೊಡಗಿದನು. ಬಾಹ್ಯದೃಷ್ಟಿಗೆ ಅವರ ಉದ್ದೇಶವು ಅಗಾಧವಾಗಿದ್ದಂತೆ ಕಂಡುಬರುತ್ತಿದ್ದರೂ ಒಳಹೊಕ್ಕು ವಿಚಾರಮಾಡಿದಾಗ ಅವು ಆತನ ಮನಸ್ಸಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ರಾಜ್ಯದ ಪ್ರಧಾನಾಧಿಕಾರಿಗಳಲ್ಲಿ ಹಲವರು ರಾಜ್ಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಹಲವು ಸುಧಾರಣೆಗಳನ್ನುಂಟುಮಾಡಬೇಕೆಂಬ ಇಷ್ಟವುಳ್ಳವರಾಗಿದ್ದರೆಂದು ತಿಳಿಯಿತು. ಅವರ ಸುಧಾರಣಾ ಮಾರ್ಗವನ್ನು ದೀರ್ಘವಾಗಿ ವಿಚಾರಮಾಡಿ ನೋಡಲು, ಅದರಿಂದ ಉಂಟಾಗುವ ಪರಿಣಾಮವು, ಅವರು ನಿರೀಕ್ಷಿಸಿದ್ದ ಪ್ರಯೋಜನಗಳನ್ನುಂಟುಮಾಡಲಾರದೆಂದು ಆತನಿಗೆ ಸ್ಪಷ್ಟವಾಯಿತು. ಆದರೂ ಪ್ರಾರಂಭದಲ್ಲಿ ಕೆಲವು ದಿನಗಳವರೆಗೆ ಅವರ ಮಾರ್ಗವನ್ನೇ ಅನುಸರಿಸಿ ಹೋಗಿ ಪರೀಕ್ಷಿಸಿದನು. ಅವರು ರಾಜ್ಯಭಾರ ವಿಚಾರದಲ್ಲಿ ಅದೂರದರ್ಶಿಗಳು ಮಾತ್ರವಲ್ಲ - ಸ್ವಾರ್ಥಸಾಧಕರೂ, ನಿಷ್ಠುರಿಗಳೂ, ದಯಾಲೇಶವೂ ಇಲ್ಲದ ನಿಷ್ಕರುಣಿಗಳೂ ಎಂಬುದು ಆತನ ಮನಸ್ಸಿಗೆ ಸ್ಪಷ್ಟವಾಯಿತು. ಸ್ವಾರ್ಥಸಾಧನೆಗಾಗಿ, ಅವರು ಪ್ರಜೆಗಳ ಮಾರ್ಗದಲ್ಲಿ ಒಡ್ಡುತ್ತಿದ್ದ ಅಡಚಣೆಗಳೆಲ್ಲವೂ ಚೆನ್ನಾಗಿ ಗೋಚರಕ್ಕೆ ಬಂದುವು. ವಿದ್ಯಾವಂತರೆಂದೆನ್ನಿಸಿಕೊಳ್ಳುವ ಬಲಿಷ್ಠರಿಂದ ಜನಸಾಮಾನ್ಯಕ್ಕೆ ಬರೀ ಕಿರುಕುಳವಲ್ಲದೆ ಮತ್ತೇನೂ ಪ್ರಯೋಜನವಿಲ್ಲವೆಂದು ಚೆನ್ನಾಗಿ ತಿಳಿದುಕೊಂಡನು. ಹೀಗೆ ನಿಜಸ್ಥಿತಿಯನ್ನು ತಿಳಿದ ತರುವಾಯ ಆತನು ಜನರಿಗೆ ಮೇಲನ್ನುಂಟುಮಾಡುವ ಮಾರ್ಗವೇನಾದರೂ ಉಂಟೇ ಎಂದೂ ಯೋಚಿಸದಿರಲಿಲ್ಲ. ಧನವಿಲ್ಲದೆ, ವಿದ್ಯೆಯಿಲ್ಲದೆ, ದೀನರಾಗಿರುವ ಅವರು ಪಶುಸ್ಥಿತಿಯಿಂದ ಉನ್ನತಿಗೆ ಬರಬೇಕಾಗಿದ್ದರೆ, ಪ್ರಬಲರಾದ ತನ್ನಂತಹವರು ಅವರ ಬೆಂಬಲಕ್ಕೆ ನಿಂತು, ನಿಸ್ವಾರ್ಥತೆಯಿಂದ ಕೆಲಸಮಾಡದಿದ್ದರೆ ಬೇರೇ ಮಾರ್ಗವೇ ಇಲ್ಲವೆಂದು ಕಂಡುಹಿಡಿದನು. ಆ ಬಡ ಜನಗಳನ್ನು ಉದ್ಧರಿಸುವುದೆಂದರೇನು ಸುಲಭವಾಗಿರಲಿಲ್ಲ. ಅವರ ಧನಸಂಪಾದನೆಯ ಮಾರ್ಗಗಳನ್ನು ಹೆಚ್ಚಿಸಿ, ಅವರು ಹೊಟ್ಟೆಗಿಷ್ಟು ಗಟ್ಟಿ ಆಹಾರ ತಿಂದು ಬದುಕುವಂತೆ ಮಾಡಬೇಕಾದುದು ಮೊದಲನೆಯ ಕೆಲಸವಾಗಿತ್ತು. ತಿಳಿವಳಿಕೆಯ ಗಂಧವೇ ಇಲ್ಲದೆ ಅವರು ಸಾಗಿಸುತ್ತಿದ್ದ ಪಶುಜೀವನದಿಂದ ಅವರಿಗೆ ಉನ್ನ

ತಿಯ ಮಾರ್ಗಗಳನ್ನು ಹೇಳಿಕೊಟ್ಟು, ಅವರ ಅಭಿವೃದ್ಧಿಗೆ ವಿಘ್ನಕಾರಿಗಳಾಗಿದ್ದ ಹಲವು ದುಷ್ಟಪದ್ಧತಿಗಳನ್ನು ತೊಲಗಿಸಬೇಕಾದುದೊಂದು ಅತ್ಯಾವಶ್ಯಕ ಕಾರ್ಯವಾಗಿದ್ದಿತೆಂದು ತಿಳಿಯಬಂತು. ಅಗಾಧವಾದ ರಾಜಕಾರ್ಯಗಳಲ್ಲಿ ದೊಡ್ಡದೊಡ್ಡ ತಿದ್ದುಪಾಟುಗಳನ್ನು ರೂಢಿಗೆ ತರುವುದಕ್ಕೆ ಮುಂಚೆ, ಜನಸಾಮಾನ್ಯದ ನಿತ್ಯಜೀವನವು ಸುಧಾರಿಸದಿದ್ದರೆ ಏನೂ ಪ್ರಯೋಜನವಿಲ್ಲವೆಂದು ಆತನಿಗೆ ಮನವರಿಕೆಯಾಯಿತು. ತನಗೆ ಸತ್ಯವೆಂದೂ ಆವಶ್ಯಕವೆಂದೂ ತೋರಿದ ಈ ವಿಷಯಗಳನ್ನು ಅಧಿಕಾರಸ್ಥಾನಗಳಲ್ಲಿದ್ದ ತನ್ನ ನೂತನ ಮಿತ್ರರಿಗೆ ಹೇಳಿ, ಪ್ರಜಾಸೇವೆಗೆ ಸಹಾಯಕರಾಗಿರೆಂದು ಸಲಹೆಕೊಟ್ಟನು. ಆದರೆ, ಪ್ರಜೆಗಳನ್ನು ಮೆಟ್ಟಿ, ಅವರ ರಕ್ತವನ್ನು ಹೀರಿ, ಅವರ ಮೇಲೆ ತಮ್ಮ ದರ್ಪವನ್ನು ನಡೆಸಿ ಸ್ವಾರ್ಥವನ್ನು ಪೂರೈಸಿಕೊಳ್ಳುವ ಅಭಿಲಾಷೆಯಿಂದ ಕೂಡಿದ್ದ ಆ ಮಹತ್ವಾಕಾಂಕ್ಷಿಗಳು ಆತನ ಆ ಉಪದೇಶಕ್ಕೆ ಕಿವಿಗೊಡುವರೆ? ಪ್ರಜೆಗಳನ್ನು ಹೆದರಿಸಿ ಬೆದರಿಸಿ ಸ್ವಾಧೀನದಲ್ಲಿಟ್ಟುಕೊಂಡು, ಅವರಿಂದ ಮಾಮೂಲಾಗಿ ಬರುತ್ತಿದ್ದ ಲಂಚ ರುಷವತ್ತುಗಳನ್ನು ಬಾಚಿಕೊಂಡು, ಆ ರುಚಿಯನ್ನು ಕಂಡಿದ್ದ ಅವರಿಗೆ ಟಾಲ್‌ಸ್ಟಾಯಿಯ ತತ್ವಬೋಧೆಯು ರುಚಿಸುವುದೆ? ಪ್ರಜೆಗಳನ್ನು ಸುಲಿಯುವವರು ಪ್ರಜಾಸೇವೆಗೆ ಸಿದ್ಧರಾಗಬಲ್ಲರೆ? ತಾನು ಹೇಳಿದ ಸತ್ಯವಾದ ನುಡಿಗಳನ್ನು ಅವರು ಕೇಳಿ ಅದರಂತೆ ನಡೆಯದಿದ್ದುದಂತಿರಲಿ ;—ಅದನ್ನು ಅಪಹಾಸ್ಯಮಾಡಿಕೊಂಡು ನಕ್ಕುಬಿಟ್ಟುದನ್ನು ನೋಡಿ, ಟಾಲ್‌ಸ್ಟಾಯಿಯ ಮನಸ್ಸಿಗೆ ಬಹು ಖೇದವೆನ್ನಿಸಿತು. ಮುಂದೆ ಅವರನ್ನು ಸ್ನೇಹಿಸಿರುವುದೂ ಆತನಿಗೆ ಸರಿತೋರಲಿಲ್ಲ. ಅಧಿಕಾರಿಗಳ ಮಾರ್ಗವು ಹೀಗಾಯಿತು. ಧನವಂತರೂ ವಿದ್ಯಾವಂತರೂ, ಬಡವರ ವಿಚಾರವನ್ನೇ ಗಮನಿಸದೆ ಸಾಧ್ಯವಾದ ಮಾರ್ಗಗಳಿಂದಲೆಲ್ಲ ಅವರನ್ನು ಸುಲಿಯುವ ಉಪಾಯವನ್ನೇ ಯೋಚಿಸುತ್ತಿರುವರೆಂದು ಕಂಡುಬಂದಿತಾಗಿ, ಅವರನ್ನು ಸ್ನೇಹಿಸಿ ಬಡವರ ಬಾಳನ್ನು ಸರಿಪಡಿಸುವ ಆಸೆಯೂ ಲಿಯೋವಿಗೆ ಅಸಾಧ್ಯವೆನ್ನಿಸಿತು. ಆಗ ಆತನು, ಈ ಬಡಜನರ ಆಜನ್ಮ ದುಃಖವಿದು, ಇದನ್ನು ತೊಲಗಿಸಲು ಇನ್ನೂ ಯೋಗ್ಯಕಾಲವೊದಗಿಲ್ಲವೆಂದು ತೋರುತ್ತದೆ; ಸದ್ಯಃ ಇತರ ದೇಶಗಳಲ್ಲೂ ಈ ಬಗೆಯ ಸ್ಥಿತಿಯೋ ಇದೆಯೋ - ಒಂದುವೇಳೆ ಇದ್ದರೆ ಅವರು ಈ ಸಂದರ್ಭಗಳಲ್ಲಿ ಏನುಮಾಡು

ತ್ತಾರೆ ಎಂಬುದನ್ನು ತಿಳಿಯುವುದೂ ಸ್ವಲ್ಪ ಸಹಾಯಕವಾಗಬಹುದು ಆದುದರಿಂದ ಸದ್ಯಃ ಕೆಲಕಾಲ ದೇಶಸಂಚಾರದಿಂದ ಮನಸ್ಸಿನ ಈ ಬೇಸರ ನನ್ನು ಕಳೆಯುವುದರೊಂದಿಗೆ ದೇಶಸ್ಥಿತಿಯನ್ನು ತಿಳಿದುಬರುವುದು ಆವ ಶ್ಯಕ ಎಂದು ಯೋಚಿಸಿ ೧೮೬೦ನೆಯ ಇಸವಿಯಲ್ಲಿ ದೇಶಸಂಚಾರಕ್ಕಾಗಿ ಹೊರಟನು.

---

## ಅಧ್ಯಾಯ ೪ 'ಲೋಕಹಿತಕಾರ್ಯಗಳು'

ಮನಸ್ಸಿನ ಬೇಸರದಿಂದ ಊರಲ್ಲಿರಲು ಇಷ್ಟಪಡದೆ ಕೌಂಟ್ ಲಿಯೋ ಟಾಲ್ಸ್ಟಾಯಿಯು ಯೂರೋಪುಖಂಡದ ಮುಖ್ಯಮುಖ್ಯ ದೇಶಗಳಲ್ಲೆಲ್ಲ ಸಂಚರಿಸಿದನು. ನಾಗರಿಕತೆಗೆ ಪ್ರಸಿದ್ಧವಾದುವೆನ್ನಿಸಿದ ಮಹಾನಗರ ಗಳಲ್ಲಿ ಕೆಲದಿನಗಳು ತಂಗಿದ್ದು ಅಲ್ಲಲ್ಲಿಯ ಸ್ಥಿತಿಗತಿಗಳನ್ನು ಕಣ್ಣಿಟ್ಟು ನೋ ಡಿದನು. ಆದರೆ ಎಲ್ಲಿ ನೋಡಿದರೂ, ಸಾಮಾನ್ಯಜನರ ವಿಚಾರವನ್ನು ಕುರಿತು ಯೋಚಿಸುವವನೊಬ್ಬನೂ ಇದ್ದಂತೆ ತೋರಲಿಲ್ಲ. ಅವರ ಹೀನಸ್ಥಿತಿಯು ಸರ್ವತ್ರ ಒಂದೇ ರೀತಿಯಾಗಿದ್ದುದು ಕಂಡುಬಂತು. ನಾಗರಿಕತೆಯಲ್ಲೂ ವ್ಯಾಪಾರ ವ್ಯವಹಾರಗಳಲ್ಲೂ ಬಹಳ ಮುಂದುವರಿದಿರುವ ರಾಷ್ಟ್ರಗಳೆಂದು ಹೆಸರಾದ ಹಲವು ದೇಶಗಳನ್ನು ಹೊಕ್ಕು ಪರೀಕ್ಷಿಸಿ ನೋಡಿದನು. ಎಲ್ಲೂ ಬಡವರ ಗತಿಯೇನೆಂದು ಯೋಚಿಸುವ ಪಾಪವನ್ನೇ ಯಾರೂ ಮನಸ್ಸಿಗೆ ಹಚ್ಚಿಕೊಂಡಂತೆ ತೋರಲಿಲ್ಲ. ನಾಲದುದಕ್ಕೆ ಎಲ್ಲೆಲ್ಲೂ ಅವರನ್ನು ಹಲವು ಬಗೆಯ ಉಪಾಯಾಂತರಗಳಿಂದ ಹೆಚ್ಚು ನಿರ್ಬಂಧಕ್ಕೆ ಸಿಲುಕಿಸಿಕೊಂಡು, ಅವರಿಂದ ಸಾಧ್ಯವಾದಷ್ಟು ಹೆಚ್ಚಾಗಿ ದುಡಿಸಿಕೊಳ್ಳುವುದು ಹೇಗೆ, ಎಂಬ ವಿಚಾರವೇ ಕಣ್ಣಿಗೆ ಬಿದ್ದಿತು. ನೋಡಿ ನೋಡಿದಂತೆಲ್ಲ ಅವರ ದುಃಖ ಸಂ ಕಟಗಳೇ ಹೆಚ್ಚುಗುತ್ತಿದ್ದಂತೆ ಕಂಡುಬಂದಿತಲ್ಲದೆ, ಅವರ ದುಃಖನಿವಾ ರಣೆಯು, ಅವರ ಕಿರುಕುಳವನ್ನು ಕಡಿಮೆಮಾಡುವ ಪ್ರಯಾಸವೇ ಯಾವನಿಗೂ ಇದ್ದಂತೆ ತೋರಲಿಲ್ಲ. ಇದನ್ನು ಕುರಿತು ಲಿಯೋವಿನ ಮನಸ್ಸು ಮತ್ತೂ ಹೆಚ್ಚಾಗಿ ವ್ಯಸನಾಕ್ರಾಂತವಾಯಿತು. ಆಗ ಆತನು, ಆ ಯೋಚನೆಯನ್ನು

ಬಿಟ್ಟು ಕೆಲವು ದಿನಗಳವರೆಗೆ ಮನೆಯಲ್ಲಿ ನಿಲ್ಲುವುದೇ ಮೇಲು - ಅವರ ಜನ್ಮದೊಂದಿಗೇ ಬಂದು, ಅವರಿಗೆ ಸ್ವಾಭಾವಿಕವಾಗಿರುವ ಈ ಸ್ಥಿತಿಯನ್ನು ಸವಾರಿಸಲೆತ್ನಿಸುವುದು ಸುಲಭವಾದ ಕಾರ್ಯವಲ್ಲ ಎಂದು ನಿರ್ಧರಿಸಿ ಹಿಂದಿರುಗಿದನು. ತರುವಾಯ ಮೂರು ಸಂವತ್ಸರಗಳಕಾಲ ಮಾಸ್ಕೋನಗರದಲ್ಲೂ ತನ್ನ ಪಾಲ್ಯಾನಾಗ್ರಾಮದಲ್ಲೂ ಕೆಲಕೆಲವು ದಿನಗಳಂತೆ ವಾಸಿಸಿ ಕಳೆದನು.

ಬೇಸರಹೊಂದಿ ಮನೆಯಲ್ಲಿ ಕುಳಿತನಾದರೂ, ನಿರುದ್ಯೋಗಿಯಾಗಿರುವುದು ಆತನಿಗೆ ಸರಿಬೀಳುತ್ತಿರಲಿಲ್ಲ. ಆತನ ಸ್ವಭಾವಕ್ಕೆ ಸದಾ ಏನಾದರೊಂದು ಉದ್ಯೋಗ ಮಾಡುತ್ತಿರುವುದೇ ಆವಶ್ಯಕವಾಗಿತ್ತು. ಆದುದರಿಂದ ಹಾಗೆ ವಾಸವಾಗಿದ್ದ ಆ ಮೂರುವರ್ಷಗಳಲ್ಲಿ ಆತನು, ತನ್ನ ಗ್ರಾಮದಲ್ಲೂ ಅದರ ಸುತ್ತುಮುತ್ತಿನ ಗ್ರಾಮಾಂತರಗಳಲ್ಲೂ ವಾಸಿಸಿದ್ದ ಒಕ್ಕಲಿಗ ಜನರ ಮತ್ತು ಬಡಸ್ಥಿತಿಯ ಇತರ ಹಲವು ವೃತ್ತಿಗಳವರ ಸ್ಥಿತಿಗತಿಗಳು, ಆಚಾರ ವ್ಯವಹಾರಗಳು, ಗುಣನಡತೆಗಳು, ಶೀಲಸಂಪ್ರದಾಯಗಳು ಹೇಗಿರುತ್ತವೆ ಎಂಬುದನ್ನು ಒಳಹೊಕ್ಕು, ಚೆನ್ನಾಗಿ ಪರೀಕ್ಷಿಸಿ ನೋಡಿದನು. ಆ ವಿಚಾರದಲ್ಲೇ ಆತನು ಮಗ್ನನಾಗಿ ಬಹುಮಟ್ಟಿನ ಅನುಭವವನ್ನು ಸಂಪಾದಿಸಿದನು. ಒಂದಿಗೇ ಮತ್ತೊಂದು ಯೋಚನೆಯೂ ಹುಟ್ಟಿತು. ವ್ಯವಸಾಯ ವೃತ್ತಿಯವರು, ಯೂರೋಪಿನ ಯಾವಯಾವ ದೇಶಗಳಲ್ಲಿ ಹೇಗೆ ಜೀವಿಸುತ್ತಿದ್ದಾರೆ ಎಂಬುದನ್ನು ತಿಳಿಯಬೇಕೆಂದೂ ಆತನು ಇಚ್ಛಿಸಿ - ಪುನಃ ಯೂರೋಪುಖಂಡದಲ್ಲೆಲ್ಲ ಸಂಚಾರಕ್ಕಾಗಿ ಹೊರಟನು. ಈ ಆದ್ಯಂತ ವಿಚಾರವನ್ನೂ ಸಂಗ್ರಹಿಸಿ, ಅವರ ನಿಶ್ಚಯವಾದ ಸ್ಥಿತಿಯಿಂಥಾದ್ದು ಎಂಬುದನ್ನು ಕಂಡುಹಿಡಿದು, ತರುವಾಯ ಯಾವುದಾದರೊಂದು ಬಗೆಯಿಂದ ಅವರಿಗೆ ಮೇಲನ್ನುಂಟುಮಾಡುವ ಉಪಾಯವನ್ನು ಹುಡುಕಬೇಕು ಎಂಬುದು ಆತನ ಆಂತರ್ಯ ಅಪೇಕ್ಷೆಯಾಗಿದ್ದಿತು. ಈ ಮಧ್ಯದಲ್ಲೂ ತಕ್ಕಷ್ಟು ಕಾರ್ಯ ಮಾಡದಿರಲಿಲ್ಲ ಸಾಮಾನ್ಯ ಜನರ ವಿದ್ಯಾಭ್ಯಾಸಕ್ಕಾಗಿ, ಅಲ್ಲಲ್ಲೇ ಪಾಠಶಾಲೆಗಳನ್ನಿಟ್ಟು ನಡೆಯಿಸಲು ಬೇಕಾದ ಸೌಕರ್ಯಗಳನ್ನು ಕಲ್ಪಿಸಿದನು. ಕಥೆಗಳ ಮೂಲಕವೇ ಅವರಿಗೆ ಜೀವನದ ಅನೇಕ ವಿಚಾರಗಳನ್ನು ತಿಳಿಸಿ, ಅವರ ಸ್ಥಿತಿಗತಿಗಳನ್ನು ತಿದ್ದಲು ಪ್ರಯತ್ನ ನಡೆಸಿದನು. ರೈತಜನರು ಪ್ರಾರಂ

ಘಕ್ಕೆ ಹೆದರಿದರಾದರೂ, ಕೊನೆಕೊನೆಗೆ ಆತನ ಮಾರ್ಗಕ್ಕೆ ಬಂದರು. ಸರ್ಕಾರದವರಿಗೂ ಅದೊಂದು ಬಗೆಯ ಕ್ರಾಂತಿಕಾರಕ ಚಳವಳಿಯೆಂದು ಪ್ರಾರಂಭಕ್ಕೆ ತೋರಿದರೂ, ಕೊನೆಗೆ ಅವರೇ, ಲಿಯೋವಿನ ಪ್ರಜಾಸೇವಾ ಮಹೋದ್ದೇಶಗಳನ್ನು ಮೆಚ್ಚಿಕೊಂಡು, ಆತನ ಆ ಬಗೆಯ ಕಾರ್ಯಗಳಿಗೆ ಉತ್ತೇಜನಕೊಡಲಾರಂಭಿಸಿದರು. ಹೀಗೆ ತನ್ನೊಬ್ಬನ ಪರಿಶ್ರಮದಿಂದ ಸಾಧ್ಯವಿದ್ದಷ್ಟು ಕಾರ್ಯಗಳನ್ನು ಮಾಡಿ, ಮತ್ತೊಮ್ಮೆ ಯೂರೋಪುಖಂಡವನ್ನೆಲ್ಲ ಸುತ್ತಿಕೊಂಡು ಬಂದ ತರುವಾಯ, ಆತನು ಪ್ರಜಾಕ್ಷೇಮ ತತ್ಪರನೆಂಬ ಖ್ಯಾತಿಯು ಸರ್ಕಾರಕ್ಕೂ ತಿಳಿದು, ಆತನಿಗೆ ಒಂದು ನ್ಯಾಯಾಧಿಪತಿಯ ಅಧಿಕಾರವನ್ನು ಕೊಟ್ಟರು. ಲಿಯೋವು, ಆ ಅಧಿಕಾರದಲ್ಲಿದ್ದಾಗ್ಗೆ, ಜನಗಳು ಗುದ್ದಾಡಿಕೊಂಡು ಬಂದರೆ ತೀರ್ಮಾನಮಾಡುವುದು ಮಾತ್ರವಲ್ಲ - ಜನಗಳಲ್ಲಿ ವೈಮನಸ್ಯವೂ ಪರಸ್ಪರ ವ್ಯಾಜ್ಯವ್ಯವಹಾರಗಳೂ ಹುಟ್ಟದಂತೆ ನೋಡಿಕೊಳ್ಳತಕ್ಕುದೇ ನ್ಯಾಯಾಧಿಪತಿಯಾದ ತನ್ನ ಕರ್ತವ್ಯವೆಂದು ಭಾವಿಸಿ, ಶ್ರದ್ಧಾಪೂರ್ವಕ ಜನಗಳ ಕ್ಷೇಮಚಿಂತನೆಯನ್ನುಂಟಾಗಿದ್ದನು.

೧೮೬೨ನೆಯ ಇಸವಿಯಲ್ಲಿ ಎಂದರೆ ಲಿಯೋವು ತನ್ನ ಮೂವತ್ನಾಲ್ಕನೆಯ ವಯಸ್ಸಿನಲ್ಲಿ ಸೋಫಿಯು ಬೆಹ್ರ ಎಂಬ ಸ್ತ್ರೀಯನ್ನು ವಿವಾಹವಾದನು. ಆಕೆಯು ಒಬ್ಬ ರಷ್ಯಾದೇಶದ ವೈದ್ಯಶ್ರೇಷ್ಠನಮಗಳು. ಲಿಯೋವಿನ ದಾಂಪತ್ಯಜೀವನದ ಪ್ರಾರಂಭದ ಕೆಲವರ್ಷಗಳು ಅತ್ಯಂತ ಸುಖಮಯವೂ ಆದರ್ಶನೀಯವೂ ಆಗಿದ್ದುವು. ಈ ಕಾಲದಲ್ಲೆಲ್ಲ ಆತನು, ಹೆಚ್ಚು ಕೆಲಸ ಕಾರ್ಯಗಳನ್ನು ತಲೆಗೆ ಹಚ್ಚಿಕೊಂಡು ವ್ಯಥೆಪಡದೆ, ಕೇವಲ ಗ್ರಂಥರಚನಾ ಕಾರ್ಯದಲ್ಲೇ ಮಗ್ನನಾಗಿದ್ದನು

ಆತನ ಮೊದಲನೆಯ ಗ್ರಂಥವು, ದಿ ಕೊಶಾಕ್ಸ್ ಎಂಬುದು. ಈ ಗ್ರಂಥದಲ್ಲಿ ಲಿಯೋವು ತನ್ನ ಜೀವಿತದ ಅತಿ ಮುಖ್ಯ ಧ್ಯೇಯವಾದ, ನಿಶ್ಚಯವಾದ ಸುಖಾನ್ವೇಷಣೆಯ ಮಾರ್ಗವೇನೆಂಬುದನ್ನು ಕುರಿತು ವಿಚಾರ ನಡೆಸಿದ್ದಾನೆ. ಈ ಗ್ರಂಥದ ನಾಯಕನೊಬ್ಬ ರಷ್ಯಾದೇಶದ ಶ್ರೀಮಂತನು. ಅವನು ಪ್ರಾರಂಭದಲ್ಲಿ ವಿಚಾರವಿಹೀನನಾಗಿಯೂ ಕೇವಲ ಸುಖಾಪೇಕ್ಷಿಯಾಗಿಯೂ, ನಿರರ್ಥಕ ಜೀವಿತವನ್ನು ಕಳೆದು, ಕೊನೆಯಲ್ಲಿ ಸುಖವೆಂಬುದು ಒಬ್ಬನು ತನಗೆ ತಾನೇ ಪಡೆಯುವ ವಸ್ತುವಲ್ಲ-ಪರರಿಗೆ ಸುಖಪ್ರದಾನ ಮಾ

ಡುವುದೇ ಒಬ್ಬನು ಸುಖವನ್ನು ಗಳಿಸುವಮಾರ್ಗ ಎಂದು ಕಂಡುಹಿಡಿದನು. ಟಾಲ್ಸ್ಟಾಯಿಯು ಸ್ವತಃ ಸೈನ್ಯದಲ್ಲಿ ಅಧಿಕಾರಿಯಾಗಿದ್ದು, ಕೀರ್ತಿ ಪ್ರತಿಷ್ಠೆಗಳನ್ನು ಗಳಿಸಿ, ಅವುಗಳ ರುಚಿಯನ್ನೂ ಕಂಡವನಾಗಿದ್ದನಲ್ಲವೆ! ಇಹಲೋಕದ ಜೀವಿತಕ್ಕೆ ಇವುಗಳಿಲ್ಲವೂ ಎಷ್ಟು ಅವಶ್ಯಕವೆಂಬಂತೆ ತೋರಿದರೂ, ಪಾರತ್ರಿಕ ಸಾಧನೆಗೆ ಇವುಗಳ ಮೂಲಕ ತಿಲಮಾತ್ರವೂ ಪ್ರಯೋಜನವಿಲ್ಲವೆಂದು ಕಂಡುಹಿಡಿದಿದ್ದನು. ಮಾತ್ರವಲ್ಲ-ಅಧ್ಯಾತ್ಮ ಜೀವನಕ್ಕೆ ಇವು ವಿರೋಧಿಗಳೆಂದೂ ಆತನಿಗೆ ಮನವರಿಕೆಯಾಗಿದ್ದಿತು. ಈ ಗ್ರಂಥದಲ್ಲಿ ಆತನು ತನ್ನ ಜೀವಿತದ ಅನುಭವಗಳನ್ನೇ ಚರ್ಚಿಸಿ ಜೀವಿತದ ಸಾರ್ಥಕತೆಯುಂಟಾಗುವುದು ಹೇಗೆ? ಎಂಬುದನ್ನು ಕಣ್ಣೆದುರಿಗಿರುವ ಕಾರಣಗಳನ್ನು ಭೇದಿಸಿ ಅದೃಶ್ಯ ತತ್ವಗಳ ಮೂಲಕ ತಿಳಿಯುವ ಪ್ರಯತ್ನಮಾಡಿದ್ದಾನೆ.

ಗ್ರಾಮಾಂತರಗಳ ಬಡಜನಗಳ ವಿದ್ಯಾಭ್ಯಾಸಕ್ಕಾಗಿ ಇನ್ನೂ ಹೆಚ್ಚಾಗಿ ಪಾಠಶಾಲೆಗಳನ್ನು ತೆರೆದು, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಯೋಚನೆಯು ಪುನಃ ಆತನ ಮನಸ್ಸನ್ನೆಲ್ಲ ವಿಶೇಷರೀತಿಯಿಂದ ವ್ಯಾಪಿಸಿತು. ಒಂದಿಗೇ ಆತನು 'ಯಸ್ನಾಯಾಪಾಲ್ಯಾನಾ' ಎಂಬೊಂದು ವಾರ್ತಾಪತ್ರಿಕೆಯನ್ನೂ ಹೊರಡಿಸಿ ಅದರಮೂಲಕ, ಜನಾಂಗ ವಿದ್ಯಾಭ್ಯಾಸ ವಿಚಾರದಲ್ಲಿದ್ದ ತನ್ನ ಉದಾತ್ತ ಅಭಿಪ್ರಾಯಗಳನ್ನು ಪ್ರಕಟಗೊಳಿಸಿದನು.

ಲಿಯೋವು ನಾಲ್ವತ್ತುವರ್ಷ ಪ್ರಾಯದವನಿದ್ದಾಗ್ಗೆ, ಒಂದು ಅಮೌಲ್ಯಗ್ರಂಥವನ್ನು ಬರೆದು ಲೋಕಕ್ಕೆ ದಾನಮಾಡಿದನು. 'ವಾರ್ ಅಂಡ್ ಪೀಸ್' 'ಯುದ್ಧವೂ-ಶಾಂತತೆಯೂ' ಎಂಬುದೇ ಆ ಗ್ರಂಥ. ಇದು ನೆಪೋಲಿಯನ್ ಕಾಲದಲ್ಲಿ ನಡೆದ ಯುದ್ಧಕಾರ್ಯಗಳನ್ನು ವರ್ಣಿಸುವ ಒಂದು ಚಿತ್ರ. ಇದರಲ್ಲಿ ಗ್ರಂಥಕರ್ತನು ತಂದಿರುವ ಪಾತ್ರಗಳೂ, ಅವರಿಂದ ಗ್ರಂಥಕರ್ತನು ಆಗಮಾಡಿಸಿರುವ ಕಾರ್ಯವೂ, ಓದುಗರನ್ನು ತಲೆದೂಗಿಸಿ, ಆಶ್ಚರ್ಯಚಕಿತರನ್ನಾಗಿ ಮಾಡುವುದಷ್ಟು ಮಾತ್ರವಲ್ಲ—ತಾನೇ ಆ ಸ್ಥಳದಲ್ಲಿದ್ದರೆ-ಯುದ್ಧರಂಗದಲ್ಲಿದ್ದರೆ ಹೇಗೋ ಅಂತಹ ವಿಚಿತ್ರ ಅನುಭವವನ್ನು ತಂದುಕೊಡುವಂತಿರುವುದು. ಇಂತಹ ಅದ್ಭುತ ಗ್ರಂಥವನ್ನು ಬರೆದು ಅದನ್ನು ಛಾಪಿಸಿ, ವಾಚಕವರ್ಗಕ್ಕೆ ಹಂಚಿದ ಕೆಲವು ದಿನಗಳೊಳಗಾಗಿಯೇ ಲಿಯೋವು, ವಿದ್ಯಾರ್ಥಿಗಳಿಗೆ ಬೇಕಾಗುವ ವರ್ಣಮಾಲೆ, ಗುಣಿತಾಕ್ಷರಗಳು

ಪ್ರಾರಂಭದ ವಾಚಕ ಪುಸ್ತಕಗಳು ಮುಂತಾದುವುಗಳನ್ನು ಬರೆಯಲು ಪ್ರಾರಂಭಿಸಿದನು. ರಷ್ಯಾದೇಶದ ಪ್ರೌಢತರಗತಿಯ ಜನರು ವಾರ್ ಅಂಡ್ ಪೀಸ್ ಗ್ರಂಥದಲ್ಲಿ ಗ್ರಂಥಕರ್ತನು ವ್ಯಕ್ತಪಡಿಸಿದ ಅಗಾಧ ವಿಚಾರಗಳನ್ನು ಕುರಿತು ಚರ್ಚೆನಡಿಸುತ್ತಿರುವ ತರುಣದಲ್ಲೇ, ಅಂತಹ ಪ್ರೌಢಲೇಖಕನು, ಮಕ್ಕಳ ವರ್ಣಮಾಲೆ-ಪ್ರಥಮಪುಸ್ತಕ ಮುಂತಾದ ಚಿಕ್ಕಚಿಕ್ಕ ಪುಸ್ತಕ ರಚನೆಗೂ ತನ್ನ ಮನಸ್ಸನ್ನು ಅಳವಡಿಸಿಕೊಂಡುದನ್ನು ಕಂಡು, ಪರಮಾಶ್ಚರ್ಯಪಟ್ಟು ಹೋದರು.

ಸರ್ವದಾ ಪ್ರಜೆಗಳ ಅವಶ್ಯಕತೆಯೇನು, ಅದನ್ನು ತಾನು ಹೇಗೆ ಸಾರ್ಥಕಗೊಳಿಸಬಹುದು ಎಂಬುದೇ ಆತನ ಮುಖ್ಯ ಚಿಂತೆಯಾಗಿದ್ದಿತು. ಆ ಕಾಲದಲ್ಲಿ ರಷ್ಯಾದ ರೈತಪ್ರಜೆಗಳು 'ವೊಡ್ಕಾ' ಎಂಬೊಂದು ಮಾದಕ ದ್ರವ್ಯವನ್ನು ಕುಡಿದು ಜ್ಞಾನತಪ್ಪಿ ತಮ್ಮ ಕುಟುಂಬ ಜೀವನವನ್ನು ನರಕವಾಸವನ್ನಾಗಿ ಮಾಡಿಕೊಳ್ಳುತ್ತಿದ್ದರು. ಲಿಯೋವು, ಅವರ ಸ್ಥಿತಿಯಲ್ಲಿ ಅವರು ಹೇಗೆ ಸುಧಾರಣೆ ಹೊಂದಿ, ಉತ್ತಮಸ್ಥಿತಿಗೆ ಬರಬಹುದೆಂಬುದನ್ನು ಬೋಧಿಸುವುದಕ್ಕಾಗಿ, ಮನೋರಂಜಕವಾದ ಹಲವು ಚಿಕ್ಕಚಿಕ್ಕ ಕಥೆಗಳನ್ನು ಬರೆದನು. ಇವುಗಳಲ್ಲಿ ಐವಾನ್ ದಿ ಫೂಲ್, ಎಂಬುದು ಬಹು ಬೋಧಕವಾಗಿದೆ. ಇದಲ್ಲದೆ, ಜನಗಳಲ್ಲಿದ್ದ ಆಲಸ್ಯಭಾವವನ್ನು ಹೊಡೆದೋಡಿಸುವುದಕ್ಕಾಗಿಯೂ ಹಲವು ಚಿಕ್ಕ ಚಿಕ್ಕ ಪುಸ್ತಕಗಳನ್ನು ಬರೆದನು. ಆತನ ಅನುಭವಕ್ಕೆ ಕೇವಲ ಶ್ರೀಮಂತರ ಜೀವನಮಾತ್ರವೇ ಪರಿಚಯವಿತ್ತೆಂದಲ್ಲ-ಕಡುಬಡವನ ಗುಡಿಸಲೂ ಸಹ ಆತನ ವರ್ಣನೆಗೆ ವಿಷಯವಾಗಿ ಚೇತನಗೊಳ್ಳುವಷ್ಟು ವ್ಯಾಪಕವಾಗಿದ್ದಿತು. ಆತನು ಬಡಜನಗಳ ಜೀವಿತ, ಅವರ ಅನುಭವಗಳು, ಕಷ್ಟತಾಪತ್ರಯಗಳು, ಮುಂತಾದುವುಗಳನ್ನು ಕೇವಲ ಹೃದಯಸ್ಪರ್ಶಿಯಾಗುವಂತೆ ವರ್ಣಿಸುವ ಅಪೂರ್ವ ಸಾಮರ್ಥ್ಯವನ್ನು ಗಳಿಸಿದ್ದನು.

ಪ್ರಜಾಸಾಮಾನ್ಯಕ್ಕೆ ಸಹಾಯಕವೆನ್ನಿಸುವ ಯಾವ ಕಾರ್ಯಬಿದ್ದರೂ, ಅದನ್ನು ನೆರವೇರಿಸುವಲ್ಲಿ ಟಾಲ್ಸ್ಟಾಯಿಯು ಮುಂದಾಳಾಗಿರುವನು. ೧೮೭೩ನೆಯ ಸಂ॥ದಲ್ಲಿ ರಷ್ಯಾದೇಶಕ್ಕೆ ಸೇರಿದ ಸಮಾರಾ, ಎಂಬೊಂದು ಪ್ರಾಂತದಲ್ಲಿ ಕ್ಷಾಮಬಿದ್ದಿತು. ಒಡನೆ ಲಿಯೋವು, ಅಲ್ಲಿಲ್ಲಿಂದ

ತಿಳಿಯುತ್ತಿದ್ದ ವರ್ತಮಾನಗಳಲ್ಲಿ ವಿಶ್ವಾಸವಿಡದೆ, ತಾನೇ ನೇರವಾಗಿ ಆ ಸ್ಥಳಕ್ಕೆ ನಡೆದು, ಸ್ವತಃ ಅನುಭವಗೊಂಡು, ಅಲ್ಲಿಯ ಪ್ರಜೆಗಳ ನಿಜವಾದ ಕಷ್ಟಸಂಕಟಗಳೇನೆಂಬುದನ್ನು ಮಾಸ್ಕೋಗೆಜೆಟ್ ಎಂಬ ವಾರ್ತಾಪತ್ರಿಕೆಯಲ್ಲಿ ಪ್ರಕಟಿಸಿದನು. ಇದರಿಂದ ಹತ್ತಿರದ ದೂರದ ಸ್ಥಳಗಳಲ್ಲಿ ವಾಸಿಸುತ್ತಿದ್ದ ಧರ್ಮಾತ್ಮರನೇಕರು ಅದಕ್ಕೆ ಸಹಾಯಮಾಡಲು ಮುಂದೆ ಬಂದುದು ಮಾತ್ರವಲ್ಲ;—ಸರ್ಕಾರದವರೂ ಸಹ, ಅಲ್ಲಿಯ ನಿಜಸ್ಥಿತಿಗಳನ್ನು ಮುಚ್ಚಿಡಲು ಸಾಧ್ಯವಿಲ್ಲದಂತಾಗಿ, ಕ್ಷಾಮನಿವಾರಣೆಗಾಗಿ ಹಲವು ಪ್ರಯತ್ನಗಳನ್ನು ಮಾಡಲೇಬೇಕಾಗಿ ಬಂತು. ಇದರಿಂದ ಪ್ರಜೆಗಳಿಗೆ ವಿಶೇಷ ಪ್ರಯೋಜನವಾಯಿತು. ಸಾವಿರಾರು ಜನಗಳು ಜೀವಿಸಲು ಮಾರ್ಗವಾಯಿತು.

೧೮೭೫ನೆಯ ಸಂವತ್ಸರದಲ್ಲಿ ನಮ್ಮ ಕಥಾನಾಯಕನು, ಅನಾಕಾರೆನಿನ ಎಂಬೊಂದು ಸುಪ್ರಸಿದ್ಧ ಕಾದಂಬರೀ ಗ್ರಂಥವನ್ನು ಬರೆದು ಪ್ರಕಟಿಸಿದನು. ಇದರಲ್ಲಿ ರಷ್ಯಾದೇಶದ ನಗರವಾಸಿಗಳ ಶ್ರೀಮಂತ ಜೀವಿತವನ್ನು ಕುರಿತು, ಮಾರ್ಮಿಕವಾದ ವಿಶೇಷ ವರ್ಣನೆಯು ಬಂದಿದೆ. ರಷ್ಯಾವನ್ನು ಎಂದೂ ನೋಡದೆಯೇ - ಆ ವಿಚಾರದ ಪರಿಚಯವೇ ಇಲ್ಲದಿರುವ ಮನುಷ್ಯನು ಈ ಗ್ರಂಥವನ್ನು ನೋಡಿದಮೇಲೆ, ತಾನು ಓದುತ್ತಿರುವುದು ರಷ್ಯಾದೇಶದ ವಿಚಾರವಲ್ಲ - ತನ್ನ ಊರಿನಲ್ಲಿ ದಿನ ದಿನವೂ ತನ್ನ ಕಣ್ಣುಮುಂದೆ ನಡೆಯುತ್ತಿರುವ ವಿಚಾರಗಳ ವರ್ಣನೆಯಿದು, ಎಂದು ಭ್ರಾಂತಿಗೊಳ್ಳುವಷ್ಟು ವಾಸ್ತವವಾಗಿವೆ, ಆತನು ಆ ಗ್ರಂಥದಲ್ಲಿ ರಚಿಸಿರುವ ವಾಕ್ಯ ಚಿತ್ರಗಳು.

ಈ ಗ್ರಂಥದಲ್ಲಿ ಲಿಯೋವು ತನ್ನ ಸ್ವಂತ ಜೀವಿತಾನುಭವವನ್ನೇ ವರ್ಣಿಸಿದ್ದಾನೆ. ಗ್ರಂಥದಲ್ಲಿ ನಾಯಕನಾದ ಲೆವಿನ್ ಎಂಬುವನು, ಟಾಲ್ಸ್ಟಾಯಿಯಂತೆಯೇ ಸತ್ಯಾನ್ವೇಷಿಯಾಗಿ, ತನಗೆ ಸತ್ಯವೆಂದು ತೋರಿದ ಜೀವಿತದ ಒಂದೊಂದು ಪ್ರಮೇಯ(*Problem*)ವನ್ನೂ ಪರೀಕ್ಷೆಗಿಟ್ಟು, ಅದರ ಸತ್ಯತೆಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾನೆ. ತನ್ನ ಜೀವಿತದ ಕೊನೆಗಾಲದಲ್ಲಿ, ಜೀವಿತವು ಅರ್ಥಶೂನ್ಯವಾದುದೆಂದು ಕಂಡುಬರುವುದೋ ಎಂಬ ಭೀತಿಯು ಆ ಕಥಾನಾಯಕನನ್ನು ಸರ್ವದಾ ಬಾಧೆಪಡಿಸುತ್ತಿರುವುದು. ಕೊನೆಗೆ ಒಬ್ಬ ರೈತನು, ಅವನನ್ನು ಸಂಧಿಸಿ, ಜೀವಿತವನ್ನು ಕೇವಲ ವಿಷಯ ಭೋಗಕ್ಕಲ್ಲ, ಆತ್ಮಹಿತಸಾಧನೆಗಾಗಿ ವಿನಿಯೋಗಿಸಬೇಕು ಎಂಬು

ದನ್ನು ತಿಳಿಸುವನು. ಮುಂದೆ ಆತನು ಜೀವಿತದ ನಿಶ್ಚಯೋದ್ದೇಶವೇನೆಂಬುದನ್ನು ತಿಳಿದು, ತನ್ನ ಸ್ಥಿತಿಯನ್ನು ಸರಿಪಡಿಸಿಕೊಳ್ಳುವನು.

ಸುಮಾರು ಐವತ್ತು ವರ್ಷ ಪ್ರಾಯವು ಕಳೆವ ವೇಳೆಗೆ ಟಾಲ್ಸ್ಟಾಯಿಯ ಜೀವಿತವು ವಿಶೇಷ ಸುಧಾರಣೆ ಹೊಂದಿದ್ದಿತು. ಆತನು ತನ್ನ ಶ್ರೀಮಂತಗಿರಿಗೆ ತಕ್ಕ ಉಡುಪನ್ನು ವಿಸರ್ಜಿಸಿ ರಷ್ಯಾದೇಶದ ಬಡರೈತ ಜನರು ಧರಿಸುತ್ತಿದ್ದಂತಹ ಸಾಮಾನ್ಯ ಉಡುಪನ್ನೇ ಧರಿಸಿ, ಅವರು ತಿನ್ನುತ್ತಿದ್ದಂತಹ ಸಾಮಾನ್ಯ ಆಹಾರವನ್ನೇ ತೆಗೆದುಕೊಳ್ಳುತ್ತ ಕೇವಲ ವಿರಕ್ತಸ್ಥಿತಿಯಲ್ಲಿ ಕಾಲಯಾಪನೆಮಾಡತೊಡಗಿದ್ದನು. ಲಿಯೋವಿನ ಮನೆಯವರೆಲ್ಲರೂ ಎಂದಿನಂತೆ ಷಡ್ರಸೋಪೇತವಾದ ಭಕ್ಷ್ಯಭೋಜ್ಯಾದಿಗಳನ್ನು ತಿನ್ನುತ್ತಿದ್ದರೂ ಆತನು ಮಾತ್ರ ಕೇವಲ ಜೀವನಾಧಾರಕ್ಕಾಗಿ ಸಾಮಾನ್ಯ ಆಹಾರದಿಂದಲೇ ತೃಪ್ತನಾಗಿ, ಸರ್ವದಾ ಬಡಜನಗಳೊಂದಿಗೆ ಸಹಾನುಭೂತಿ ವಹಿಸಿ, ಸರ್ವವಿಧಗಳಿಂದಲೂ ಅವರ ಸೇವೆಯಲ್ಲೇ ಮಗ್ನನಾಗಿರುವನು.

ನಾಗರಿಕತೆಯೂ, ಐಶ್ವರ್ಯವೂ, ಜನಗಳಿಗೆ ಕಷ್ಟಸಹಿಷ್ಣುತಾಭ್ಯಾಸವನ್ನು ದೂರಗೊಳಿಸಿ, ಅವರನ್ನು ಇಂದ್ರಿಯಲೋಲುಪರನ್ನಾಗಿ ಮಾಡಿವೆಯೆಂದೂ, ಅದನ್ನು ಹೋಗಲಾಡಿಸದಿದ್ದಲ್ಲಿ, ಜೀವಿತದ ಮುಖ್ಯೋದ್ದೇಶ್ಯವೇ ಕಣ್ಮರೆಯಾಗಿ ಪ್ರಜೆಗಳು ಭ್ರಾಂತಿಮಾರ್ಗದಲ್ಲಿ ನಡೆದು ಜೀವಿತವನ್ನು ನಿರರ್ಥಕಪಡಿಸಿಕೊಳ್ಳುವರೆಂಬುದೂ ಲಿಯೋವಿನ ಮನಸ್ಸಿನಲ್ಲಿ ಸರ್ವದಾ ಚಿಂತೆಗೆ ವಿಷಯವಾಗಿದ್ದಿತು. ಆತನು ತನ್ನ ಮನಸ್ಸಿಗೆ ತೋರಿದ ಒಂದು ವಿಚಾರವನ್ನು ಸರ್ವವಿಧದಿಂದಲೂ ಪರೀಕ್ಷಿಸಿ ಅದರ ಸತ್ಯತೆಯನ್ನು ಮನಗಂಡಲ್ಲದೆ ಮುಂದಕ್ಕೆ ಹೋಗುತ್ತಿರಲಿಲ್ಲ. ಮನುಷ್ಯನಲ್ಲಿ - ತಾನೇ ದೊಡ್ಡವ, ವಿದ್ಯಾವಂತ, ಧನವಂತ, ಬುದ್ಧಿವಂತ, ತನ್ನ ಸಮಾನ ಮತ್ತಾರಿನ್ನಾರೆ ಎಂಬ ಮುಂತಾದ ದಂಭವೇ ಸರ್ವಾನರ್ಥಗಳಿಗೂ ಮೂಲವೆಂದೂ, ಮನುಷ್ಯನು ವಿದ್ಯಾಬುದ್ಧಿಗಳಿಂದ ಅಭಿವೃದ್ಧಿಹೊಂದುತ್ತ ಸಾಗಿದಂತೆಲ್ಲ ವಿನಯಶೀಲನಾಗಬೇಕಾದುದು ಆವಶ್ಯಕವೆಂದೂ ಆತನು ಸಾರಿಹೇಳಿದನು.

ದಿನದಿನಕ್ಕೆ ಆತನ ಮನಸ್ಸನ್ನು ವೈರಾಗ್ಯಭಾವವು ಆಕ್ರಮಿಸತೊಡಗಿತು. 'ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ'. ಪರೋಪ

ಕಾರವೇ ಜೀವಿತದ ಪರಮ ಸಾಧನವೆಂಬ ನಿಶ್ಚಯವು ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ಆತನಿಗೆ ಸತ್ಯವೆನ್ನಿಸತೊಡಗಿತು. ಪರರ ಕಷ್ಟ ನಿವಾರಣೆಗಾಗಿ ಹೆಣಗುವುದೇ ತನ್ನ ಜೀವಿತದ ಪರಮೋದ್ದೇಶವೆಂದು ತಿಳಿದು, ತನ್ನ ಸುಖ ಸಂತೋಷಗಳನ್ನೆಲ್ಲ ಒಂದೊಂದಾಗಿ ತ್ಯಜಿಸುತ್ತ ಬಂದನು. ಚಿಕ್ಕಂದಿನಲ್ಲಿ ತನಗೆ ಅಷ್ಟು ಪ್ರೀತ್ಯಾಸ್ಪದವಾಗಿದ್ದ ಬೇಟೆಯನ್ನೂ ಆಟಪಾಟಗಳನ್ನೂ ಬಿಟ್ಟನು. ಹೊಗೆಯುಬತ್ತಿಯನ್ನು ಸೇದುವಿಕೆಯನ್ನು ಸಹ ದೂರೀಕರಿಸಿದನು. ದ್ರವ್ಯವು ಅನರ್ಥಸಾಧನದ ಮೂಲವೆಂಬುದನ್ನು ತಿಳಿದು ಅದನ್ನು ಮುಟ್ಟಲು ಹೇಸುತ್ತಿದ್ದನು. ಬಡಜನಗಳಂತೆ ಸ್ವತಃ ಕೈ ಕೆಲಸಮಾಡಲು ಸಂಕಲ್ಪಿಸಿ, ಪಾದರಕ್ಷೆ(ಬೂಟ್ಸು)ಗಳನ್ನು ಮಾಡುವಿಕೆಯನ್ನು ಕಲಿಯತೊಡಗಿ ಕೆಲವುದಿನಗಳಲ್ಲೇ ಆ ವೃತ್ತಿಯಲ್ಲಿ ವಿಶೇಷ ಅನುಭವವನ್ನು ಸಂಪಾದಿಸಿದನು. ಮನುಷ್ಯನು ಆಶಾಪಾಶಗಳನ್ನು ತ್ಯಜಿಸಿ, ಬಹು ಸ್ವಲ್ಪ ವಸ್ತುಗಳಿಂದಲೇ ಜೀವಿತವನ್ನು ಸಾಗಿಸುವ ಮಿತಜೀವನ ಕ್ರಮವನ್ನು ಅಭ್ಯಸಿಸುವುದೇ, ನಿತ್ಯಸುಖದ ಮೂಲಮಂತ್ರವೆಂದು ಕಂಡು ಹಿಡಿದಿದ್ದನು.

ಲೋಕದಲ್ಲಿ ಇಷ್ಟುಮಟ್ಟಿನ ದುಃಖ ತಾಪತ್ರಯಗಳೂ, ಜನಗಳಲ್ಲಿ ದ್ವೇಷಾಸೂಯೆಗಳೂ ವ್ಯಾಪಿಸಿರುವುದಕ್ಕೆ ಜನಸಮೂಹದಲ್ಲಿ ಹಲವು ತರಗತಿಗಳುಂಟಾಗಿರುವುದೇ ಮುಖ್ಯ ಕಾರಣವೆಂಬುದು ಆತನಿಗೆ ಮನವರಿಕೆಯಾಯಿತು. ಧನಿಕರು ಸಾಧ್ಯವಾದಷ್ಟು ಉಪಾಯಗಳಿಂದ ದರಿದ್ರರೊಂದಿಗೆ ಬೆರೆಯದಂತೆ ದೂರವಾಗಿರಬೇಕೆಂದು ಪ್ರಯತ್ನಿಸುತ್ತ ತಾವು ಬೇರೆಯಾಗುತ್ತಿರುವುದೇ ಪರಸ್ಪರ ಪ್ರೀತಿವಿಶ್ವಾಸಗಳೂ, ಸ್ನೇಹಸಹಾನುಭೂತಿಗಳೂ ಉಂಟಾಗದಿರುವುದಕ್ಕೆ ಮುಖ್ಯ ಕಾರಣವೆಂದು, ಆತನು ಕಂಡುಹಿಡಿದನು. ಆಹಾರ, ಉಡಿಗೆತೊಡಿಗೆ, ವಾಸಸ್ಥಳ, ಶುಚಿ, ವಿದ್ಯಾಭ್ಯಾಸ ಈ ಎಲ್ಲಾ ವಿಚಾರಗಳಲ್ಲೂ, ಧನಿಕರು ತಾವು ಬಡವರೊಂದಿಗೆ ಬೆರೆಯಲು ಆಸ್ಪದವಿಲ್ಲದಂತೆಯೂ ತಮ್ಮ ಸ್ಥಿತಿಯು ಬದಲಾಗದಂತೆಯೂ ತಕ್ಕ ಸಾಧನಗಳನ್ನು ಕಲ್ಪಿಸಿಕೊಂಡು, ಉದ್ದೇಶಪೂರ್ವಕವಾಗಿ ಬೇರೆಯಾಗುತ್ತಿರುವರು. ಹೀಗಿರುವಲ್ಲಿ, ಉಭಯರಲ್ಲೂ ಸ್ನೇಹಪ್ರೇಮಗಳು ಉಂಟಾಗಲು ಮಾರ್ಗವೇನಿದೆ ಎಂದು ಆತನು ವಾದಿಸಿದನು.

ಒಂದು ತರಗತಿಯವರು ಮತ್ತೊಂದು ತರಗತಿಯವರಿಗೆ, ಸೇವಕಾ ವೃತ್ತಿಯಲ್ಲಿರುವುದು ಅಸ್ವಾಭಾವಿಕವಾದುದೆಂದು ಆತನು ಭಾವಿಸಿದನು ಮನುಷ್ಯವರ್ಗದಲ್ಲಿ ಪರಸ್ಪರ ದ್ವೇಷಾಸೂಯೆಗಳೂ ಅಸಹನೆಯೂ ದಂಭ ಅಹಂಕಾರಗಳೂ ಹುಟ್ಟಿ ಹಬ್ಬಲು ಇದೇ ಮೂಲಕಾರಣವೆಂದು ಕಂಡು ಹಿಡಿದು, ಆತನು, ಆ ಪದ್ಧತಿಯನ್ನು ಮೂಲೋತ್ಪಾಟನಮಾಡಬೇಕೆಂದು ಉದ್ಯೋಗಿಸಿದನು. ಪ್ರಾರಂಭಕ್ಕೆ, ತಾನು ಮತ್ತೊಬ್ಬ ಮಾನವಪ್ರಾಣಿಗೆ ಭಾರವೆನ್ನಿಸದಂತೆ ಇರಬೇಕಾದುದು ಆವಶ್ಯಕವೆನ್ನಿಸಿತು. ಒಡನೆ ತನ್ನ ಕೆಲಸ ಕಾರ್ಯಗಳಿಗಾಗಿ ಯಾವ ದಾಸದಾಸಿಯರನ್ನೂ ಇಟ್ಟುಕೊಳ್ಳದಂತೆ ತನ್ನ ಕೆಲಸಗಳನ್ನೆಲ್ಲ ತಾನೇ ಮಾಡಿಕೊಳ್ಳಲು ಪ್ರಾರಂಭಿಸಿದನು *'What shall we do'* ಎಂಬೊಂದು ಗ್ರಂಥದಲ್ಲಿ ಆತನು, ರಷ್ಯಾದೇಶದ ಬಡತನದ ಮತ್ತು ಸಮಾಜವು ಹಲವು ತರಗತಿಗಳಾಗಿ ವಿಂಗಡಿಸಲ್ಪಟ್ಟಿರುವುದರ ದುಷ್ಪರಿಣಾಮಗಳನ್ನು ವಿಶೇಷವಾಗಿ ವರ್ಣಿಸಿದ್ದಾನೆ.

ಇವುಗಳೊಂದಿಗೆ, ಮತವಿಚಾರದಲ್ಲಿ, ಜನಸಮಾಜದಲ್ಲಿ ನೆಲೆಸಿದ್ದ ದಾಸ್ಯಮನೋಭಾವವೂ ಆತನಿಗೆ ಸಮಂಜಸವೆಂದು ತೋರಲಿಲ್ಲ. ಆಗ ಚರ್ಚ್‌ಗಳಲ್ಲಿ ನಡೆಯುತ್ತಿದ್ದ ಹಲವು ಅನ್ಯಾಯ ಅಪಡ್ಡಾಳ ವೃತ್ತಿಗಳನ್ನು ಕಂಡು ಹೇಸಿ ಅವುಗಳನ್ನು ಸುಧಾರಿಸಲು ಯತ್ನಿಸಿದನು. ಪ್ರಾರಂಭಕ್ಕೆ, ಚರ್ಚಿನ ಕಡೆ ಬೆನ್ನು ತಿರುಗಿಸಿ ಏಸುಕ್ರೈಸ್ತನು ಹೇಳುವ ಮುಖ್ಯ ಬೋಧನೆಗಳೇನೆಂದು ಅವುಗಳನ್ನು ಪರೀಕ್ಷಿಸತೊಡಗಿ, ಕ್ರೈಸ್ತರೆಂದುಕೊಳ್ಳುವ ತಾವು ಏಸುಕ್ರಿಸ್ತನ ಬೋಧನೆಗಳನ್ನು ಮೀರಿ ಬಹುದೂರ ಬಂದುಬಿಟ್ಟಿದ್ದೇವೆಂದು ಪಶ್ಚಾತ್ತಾಪಗೊಂಡು, ಧಾರ್ಮಿಕ ಜೀವನಕ್ಕೊಂದು ಮಾರ್ಗವನ್ನು ಕಲ್ಪಿಸಲು ಸಂಕಲ್ಪಿಸಿದನು. ಆ ಕಾಲದಲ್ಲಿ ಆತನು *My Confession* ಮತ್ತು *My Religion* ಎಂಬೆರಡು ಗ್ರಂಥಗಳನ್ನು ರಚಿಸಿದನು. ಏಸುಕ್ರಿಸ್ತನು ಬೋಧಿಸಿದ ದಶಾಜ್ಞೆಗಳನ್ನು ಕಡಮೆಮಾಡಿ ಐದಕ್ಕಿಳಿಸಿದನು.* 'ಕ್ರೋಧಕ್ಕೆ ಆಸ್ಪದಕೊಡಬೇಡ' 'ವ್ಯಭಿಚಾರಮಾಡಬೇಡ' 'ಆಣೆಪ್ರಮಾಣಗಳನ್ನಿಟ್ಟುಕೊಳ್ಳಬೇಡ' 'ಸ್ವಸಂರಕ್ಷಣೆಗಾಗಿ ಹಿಂಸಾಮಾರ್ಗವನ್ನವಲಂಬಿ

---

*Never fall into rage. Do not commit adultry. Take no oath. Use no violence in self defence, and Make no war'.

ಸಬೇಡ' 'ಯುದ್ಧಮಾಡಬೇಡ'—ಈ ಐದು ತತ್ವಗಳನ್ನನುಸರಿಸಿ ಜನಸಮಾಜವು ನಡೆವಂತಾದರೆ, ಲೋಕದಲ್ಲಿ ಸುಖಸಾಮ್ರಾಜ್ಯವು ಸ್ಥಾಪಿಸಲ್ಪಡುವುದೆಂದು ಆತನು ನಂಬಿದನು. ಹೀಗೆ ಹಲವು ಬಗೆಯ ಲೋಕಸೇವಾಕಾರ್ಯಗಳಿಗಾಗಿ ಆತನು ಸರ್ವದಾ ಶ್ರಮೆಪಡುತ್ತಿದ್ದನು.

## ಅಧ್ಯಾಯ ೫ 'ಧ್ಯೇಯಸಾಧನೆ'

ಪೂರ್ವಾಧ್ಯಾಯದ ಕೊನೆಯ ಭಾಗದಲ್ಲಿ ಹೇಳಿದಂತೆ, ಅದುವರೆಗೆ ನಡೆದುಬಂದ ಚರ್ಚ್ ಮುಂತಾದ ಧಾರ್ಮಿಕ ಸಂಸ್ಥೆಗಳಿಗೆ ವಿರುದ್ಧವಾಗಿ, ತನ್ನ ಅಭಿಪ್ರಾಯಾನುಸಾರವಾಗಿ ಪ್ರತ್ಯೇಕ ಸಿದ್ಧಾಂತಗಳನ್ನೇ ಏರ್ಪಡಿಸಿಕೊಂಡ ಲಿಯೋಟಾಲ್‌ಸ್ಟಾಯಿಗೆ, ಅದೊಂದು ಮಾತ್ರವಲ್ಲ, ರಾಜ್ಯಾಡಳಿತಕ್ಕಾಗಿ ಏರ್ಪಟ್ಟಿದ್ದ ಸರ್ಕಾರ, ನ್ಯಾಯಾಸ್ಥಾನಗಳು, ಸೈನ್ಯ ಮುಂತಾದುವೂ ಕೊನೆಯದಾಗಿ ಆಗ ಸಮಾಜದಲ್ಲಿ ಆಚರಣೆಯಲ್ಲಿದ್ದ ವಿವಾಹ ಪದ್ಧತಿಯೂ ಸಹ ಅನ್ಯಾಯವೆಂದು ತೋರಸಾಗಿದುವು. ಸರ್ಕಾರದ ರೀತಿ ನೀತಿಗಳನ್ನು ಕುರಿತು ಆತನು ಹೇಳುತ್ತಿದ್ದ ಮಾತುಗಳು ಬಹು ನಿರ್ದಾಕ್ಷಿಣ್ಯಕರವಾಗಿದ್ದುವು. ಸತ್ಯ ವಿಚಾರವನ್ನು ಆತನಿಗಿಂತ ಎಷ್ಟೋ ಮಟ್ಟಿನ ಸೌಮ್ಯರೀತಿಯಲ್ಲಿ ಹೇಳಿದವರಿಗೆಲ್ಲ ಭಯಂಕರ ಶಿಕ್ಷೆಗಳನ್ನು ವಿಧಿಸಿದರು. ಸಾರ್ ಪ್ರಭುಗಳ ಆಡಳಿತದಲ್ಲಿ ರಷ್ಯಾ ಸರ್ಕಾರದವರಿಂದ ಆಗುತ್ತಿದ್ದ ಶಿಕ್ಷೆಯೆಂದರೆ ಅತ್ಯಂತ ಭಯಂಕರವಾದುವು. ಸರ್ಕಾರಕ್ಕೆ ವಿರುದ್ಧವಾಗಿ, ಒಂದು ಮಾತನ್ನಾಡಿದರೆ ಸಾಕು, ಅಂಥವರನ್ನು ಸೈಬೀರಿಯಾ ದೇಶದ ಅತಿಶಯ ಹಿಮವತ್ಪ್ರದೇಶಕ್ಕೆ ಸಾಗಿಸಿ, ಅಲ್ಲಿ ರಕ್ತವೇ ಗಡ್ಡೆಕಟ್ಟಿಕೊಂಡುಹೋಗುವಂತಹ ಚಳಿಯಲ್ಲಿ, ಕ್ಷಣಶಃ ಮರಣ ದುಃಖವನ್ನನುಭವಿಸುವಂತೆ ಮರಣಾವಧಿ ಸೆರೆಯಲ್ಲಿಟ್ಟುಬಿಡುವರು. ಲೇಶಮಾತ್ರ ತಪ್ಪುಮಾಡಿದವರನ್ನು ಸಹ, ಕನಿಕರ ಲೇಶವೂ ಇಲ್ಲದೆ, ಗಣಿಗಳಲ್ಲಿ ಕೆಲಸಮಾಡಿಸುತ್ತಲೂ, ಪಶುಗಳಂತೆ ಹೊಡೆಯುತ್ತಲೂ, ಹಲವು ವಿಧಗಳಲ್ಲಿ ಚಿತ್ರಹಿಂಸೆಗೆ ಗುರಿಪಡಿಸುತ್ತಿದ್ದರು. ಹೀಗೆ ಎಷ್ಟುಜನರು ತಮ್ಮ ಸರ್ವಸ್ವವನ್ನೂ ಕೊನೆಗೆ ಪ್ರಾಣಗಳನ್ನೂ

ಕಳೆದುಕೊಂಡರೆಂಬುದಕ್ಕೆ ಲೆಕ್ಕವಿಲ್ಲ. ಆದರೆ ನಮ್ಮ ಕಥಾನಾಯಕನ ಮೇಲೆ ಮಾತ್ರ, ರಷ್ಯಾದೇಶದಲ್ಲಿ ಯಾವ ಅಧಿಕಾರಿಯೂ ತನ್ನ ಬೆರಳನ್ನು ಎತ್ತುವಂತೆ ಇರಲಿಲ್ಲ. ಆತನ ವ್ಯಕ್ತಿಗೌರವವನ್ನು ಧಿಕ್ಕರಿಸಲು ಯಾವನಿಂದಲೂ ಸಾಧ್ಯವಿಲ್ಲದೆ, ರಷ್ಯಾದಂತಹ ನಿರಂಕುಶಪ್ರಭುತ್ವದಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ವಿಜಯವನ್ನು ಗಳಿಸಿದ ಪ್ರಥಮ ಪುರುಷನಾಗಿ ನಮ್ಮ ಕಥಾನಾಯಕನು, ಝಾರನ ಪ್ರಭುತ್ವಕ್ಕೆ ಶೂಲಪ್ರಾಯನಾಗಿದ್ದನು.

ಈ ಕಾಲದಲ್ಲೇ ಆತನು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಎಲ್ಲಕ್ಕಿಂತಲೂ ಹೆಚ್ಚಾಗಿ ಕುಶಲ ಕಲಾ ವಿಷಯದಲ್ಲಿ, ಆತನು ಏನು ಹೇಳುತ್ತಿದ್ದನೆಂಬುದನ್ನು ಆಧುನಿಕರು ಕೇಳಿದ್ದಾದರೆ ಆಶ್ಚರ್ಯಮಗ್ನರಾಗಬಹುದು ಅಥವ ಆತನನ್ನು ಅರಸಿಕನಾದ - ಧೂರ್ತನೆಂದೂ ಕಾಡುಮನುಷ್ಯನೆಂದೂ ಬಹಿಷ್ಕರಿಸಬಹುದು. ಆತನು ಚಿತ್ರ ಮುಂತಾದ ಕುಶಲ ಕಲೆಗಳನ್ನು ಮಾತ್ರವಲ್ಲ, ಷೇಕ್ಸ್‌ಪಿಯರ್, ಬೀಥೋವೆನ್ ಮುಂತಾದ ಸುಪ್ರಸಿದ್ಧ ಕವಿತಾ ಲೇಖಕರ ಅಜರಾಮರವಾದ ಕಾವ್ಯ ರತ್ನಗಳನ್ನು ಮಾತ್ರವಲ್ಲ - ತನ್ನಿಂದಲೇ ರಚಿತವಾಗಿ ಲೋಕಪ್ರಸಿದ್ಧಗಳೆನ್ನಿಸಿದ ಅನಕಾರೆನಿನ, ವಾರ್ ಅಂಡ್ ಪೀಸ್, ದಿ ಕೊಸಾಕ್ಸ್ ಮುಂತಾದ ದಿವ್ಯ ಕಾದಂಬರಿಗಳನ್ನೂ ಅನುಪಯೋಗಕಾರಿಗಳೆಂದೂ, ವ್ಯರ್ಥ ಪ್ರಯತ್ನಗಳೆಂದೂ ಹಳಿದಿದ್ದಾನೆ. ಮುಂದೆ ಆ ಬಗೆಯ ಗ್ರಂಥಗಳೇನನ್ನೂ ಬರೆಯದೆ, ನೀತಿಬೋಧಕವೂ, ಬಡಜನಗಳ ದುಃಖನಿವಾರಣೆಗೆ ಸಹಾಯಕವೂ ಆದ ಹಲವು ಚಿಕ್ಕ ಪುಟ್ಟ ಪುಸ್ತಕಗಳನ್ನು ಬರೆಯಲಾರಂಭಿಸಿದನು. '*What is art*' ಕಲೆಯೆಂದರೇನು ? ಎಂಬೊಂದು ಲೇಖನದಲ್ಲಿ ಆತನು -' ಕಲೆಯು ಜನಸಮಾಜದ ಗುಲಾಮಗಿರಿಯಿಂದಲೇ ಜನ್ಮಗೊಂಡು, ಆ ದಾಸ್ಯಸ್ಥಿತಿಯು ಎಷ್ಟು ಕಾಲವಿರುವುದೋ ಅಷ್ಟು ಕಾಲದವರೆಗೆ ಮಾತ್ರ ಜೀವಿಸತಕ್ಕುದಾಗಿದೆ. ಜನಸಮಾಜದವರು ದಾಸ್ಯಚಿತ್ತವೃತ್ತಿಯಿಂದ ಎಷ್ಟು ದಿನಗಳವರೆಗೆ ಅಗಾಧ ಕಷ್ಟನಷ್ಟಗಳಿಂದ ನರಳಲು ಸಿದ್ಧರಿರುವರೋ ಅಲ್ಲಿಯವರೆಗೆ ಮಾತ್ರವೇ, ಗ್ರಂಥಕರ್ತರು, ಕವಿಗಳು, ಸಂಗೀತಗಾರರು, ನಾಟ್ಯಗಾರರು, ಚಿತ್ರಗಾರರು ಮುಂತಾದ ಕುಶಲ ವಿದ್ಯೆಯ ಅಧಿಕಾರಿಗಳು ತಮ್ಮ ವಿದ್ಯೆಗಳಲ್ಲಿ ಪೂರ್ಣಪರಿಶ್ರಮಹೊಂದಲು ಸಾಧ್ಯವಿರುವುದು. ಜನಗಳನ್ನು ಅಂತಹ ದಾಸ್ಯವೃತ್ತಿಯಿಂದಲೂ ಗುಲಾ

ಮಗಿರಿಯಿಂದಲೂ ಬಿಡುಗಡೆಮಾಡಿಸಲು ಪ್ರಯತ್ನವೊಂದು ನಡೆದು ಸಫಲ ಹೊಂದಿತಾದರೆ, ತರುವಾಯ ಇಂತಹ ಕುಶಲ ಕಲೆಗಳು ಬೆಳೆಯಲು ಅವಕಾಶವೇ ಒದಗಲಾರದು' ಹೀಗೆಂದು ಬರೆದಿದ್ದಾನೆ. ಇದರಿಂದ ಆತನಿಗೆ ಕುಶಲ ಕಲೆಗಳ ಅಭಿವೃದ್ಧಿಗಿಂತಲೂ ಜನಾಂಗದ ಸೌಖ್ಯ-ಸಮೃದ್ಧಿಗಳ ವಿಷಯದಲ್ಲಿ ಎಷ್ಟುಮಟ್ಟಿನ ಆಂತರ್ಯ ದೀಕ್ಷೆಯಿತ್ತು ಎಂಬುದರ ಪರಿಚಯವಾಗುವುದು.

ಆದರೆ ಕಲೆ ಮುಂತಾದುವುಗಳು ಜನಾಂಗದಲ್ಲಿ ಸ್ನೇಹಪ್ರೇಮಗಳೂ ಭ್ರಾತೃಭಾವನೆಯೂ ಅಭಿವೃದ್ಧಿಗೊಳ್ಳಲು ಸಾಧಕವಾಗಿ ನೆಲೆಸಬೇಕೆಂದು ಆತನು ಆಶಿಸಿದ್ದಾನೆ. ಕಲೆಯು ಮನುಷ್ಯನ ವಿಷಯೇಂದ್ರಿಯ ತೃಪ್ತಿಗಾಗಿ ನಿರ್ಮಿತವಾಗದೆ, ಧಾರ್ಮಿಕ ಭಾವನೆಯ ಫಲವಾಗಿ ನಿರ್ಮಿತವಾಗುವುದರಿಂದ ಕರ್ತೃವಿನ ನೈತಿಕ ಜೀವನಕ್ಕೆ ಬಾಧೆಯುಂಟುಮಾಡಲಾರದೆಂದೂ ಆತನ ಭಾವನೆಯಾಗಿದ್ದಿತು.

'ಲಿಯೋ ಟಾಲ್ಸ್ಟಾಯಿಯು ಇನ್ನೂ ಹಲವು ಅಮೌಲ್ಯಗ್ರಂಥಗಳನ್ನು ರಚಿಸಬಹುದು, ಆತನಿಂದ ರಷ್ಯಾದ ಸಾಹಿತ್ಯಸೌಭಾಗ್ಯವು ಅಜರಾಮರವಾಗಬಹುದು, ಎಂದು ಮುಂತಾಗಿ ಭಾವಿಸಿದ್ದ ಆ ದೇಶದ ಸಾಹಿತ್ಯಸೇವಕರ ಆಸೆಯು ಆತನ ಮೇಲ್ಕಂಡ ನಿರ್ಧಾರದಿಂದ ಕುಂದತೊಡಗಿತು. ಆ ಸಂದರ್ಭದಲ್ಲಿ, ಟೋರ್ಗನೀ ಎಂಬೊಬ್ಬ ಸುಪ್ರಸಿದ್ಧ ಸಾಹಿತ್ಯಸೇವಕನು, ತನ್ನ ಮರಣಶಯ್ಯೆಯಿಂದ ಲಿಯೋವಿಗೆ ಒಂದು ಸಂದೇಶವನ್ನು ಕಳುಹಿಸಿದನಂತೆ! ಅದರಲ್ಲಿ-'ಪ್ರಿಯಮಿತ್ರನೇ, ಪುನಃ ನಿನ್ನೀ ಸಾಹಿತ್ಯಸೇವಾಕಾರ್ಯವನ್ನು ದಯವಿಟ್ಟು ಕೈಕೊಳ್ಳೆಂದು ನಾನು ವಿನಂತಿ ಮಾಡುತ್ತೇನೆ. ಈ ವರದಾನವು ಸಾಮಾನ್ಯವಾದುದಲ್ಲ, ಭಗದ್ದತ್ತವಾದುದು. ಸರ್ವಾಭೀಷ್ಟಪ್ರದಾಯಕನಾದ ಲೋಕಪಿತನ ಈ ವರದಾನವನ್ನು ಜನಾಂಗದ ಅಭಿವೃದ್ಧಿಗಾಗಿ ಉಪಯೋಗಿಸಲು ಮತ್ತೊಮ್ಮೆ ಪ್ರಯತ್ನಿಸು. ನನ್ನೀ ಪ್ರಾರ್ಥನೆಯನ್ನು ದಯವಿಟ್ಟು ನಡೆಯಿಸಿಕೊಡು. ನಮ್ಮ ದೇಶದ ಸರ್ವಶ್ರೇಷ್ಠ ಗ್ರಂಥಕಾರನಾದ ನೀನು ಈ ವಿಷಯದಲ್ಲಿ ಉದಾಶೀನನಾಗಬೇಡ' ಎಂದು ವಿಜ್ಞಾಪಿಸಿಕೊಂಡಿದ್ದನೆಂದು ಪ್ರಕಟವಾಗಿದೆ. ಈ ಪ್ರಾರ್ಥನೆಯನ್ನು ಅನು

ಸರಿಸಿಯೇ, ಮುಂದೆ ಪ್ರಕಟವಾದ ಕೆಲವು ಗ್ರಂಥಗಳು ಆತನಿಂದ ರಚಿಸಲ್ಪಟ್ಟುವೆಂದು ತೋರುತ್ತದೆ.

ತನ್ನ ಮನಸ್ಸಾಕ್ಷಿಗನುಸಾರವಾಗಿ ತಾನು ಏರ್ಪಡಿಸಿಕೊಂಡ ತತ್ವಗಳನ್ನು ಅನುಸರಿಸಿ ಅವುಗಳಂತೆಯೇ ನಡೆಯಬೇಕಾದುದು ತನ್ನ ಕರ್ತವ್ಯವೆಂಬ ಭಾವನೆಯು ಆತನಿಗುಂಟಾಯಿತು. ಒಡನೆ ಏಸುಕ್ರಿಸ್ತನ ಬೋಧನೆಯನ್ನನುಸರಿಸಿ, ತನಗಿದ್ದುದನ್ನೆಲ್ಲಾ ತ್ಯಾಗಮಾಡಲು ಸಿದ್ಧನಾದನು. ತಾನು ಒಬ್ಬನೇ ಆಗಿದ್ದಲ್ಲಿ, ತನ್ನ ಮನಬಂದಂತೆ ಒಡನೆ ಮಾಡಿಬಿಡಬಹುದಿತ್ತು. ಆದರೆ, ಆತನ ಹೆಂಡಿರುಮಕ್ಕಳೂ, ಕುಟುಂಬದ ಇತರರೂ ಅದಕ್ಕೆ ಒಪ್ಪಲಿಲ್ಲ. ಮಕ್ಕಳು ವಯಸ್ಸಿನಲ್ಲಿ ಬೆಳೆಯುತ್ತ ಬಂದಂತೆಲ್ಲಾ ಅವರಿಗೆ ಉನ್ನತ ವಿದ್ಯಾಭ್ಯಾಸದ ಸೌಕರ್ಯವನ್ನು ಕಲ್ಪಿಸಲಿಕ್ಕಾಗಿ ಕುಟುಂಬವು ಮಾಸ್ಕೋನಗರದಲ್ಲಿ ವರ್ಷದ ಬಹುಭಾಗ ಕಾಲ ವಾಸಿಸಬೇಕಾಗಿತ್ತು. ಲಿಯೋವು ಆ ನಗರದಲ್ಲಿ ವಾಸಿಸಿದ್ದಾಗ ಸಹ ತನ್ನ ಧ್ಯೇಯದಂತೆ, ಕುರಿಯ ಚರ್ಮವನ್ನೇ ಉಡುಪಾಗಿಯೂ, ದಪ್ಪವಾದ ಒರಟು ಬೂಟುಗಳನ್ನು ಪಾದರಕ್ಷೆಗಾಗಿಯೂ ಉಪಯೋಗಿಸುತ್ತ, ಮನೆಯವರೆಲ್ಲರೂ ಉತ್ತಮವಾದ ಆಹಾರವನ್ನು ಉಪಯೋಗಿಸುತ್ತಿದ್ದರೆ, ತಾನೊಬ್ಬನೇ ಮನೆಯ ಒಂದು ಅಭುಕ್ತ ಮೂಲೆಯಲ್ಲಿ ಕುಳಿತು ಪ್ರಾಣಾಧಾರವಾಗಿ ಏನೋ ಸ್ವಲ್ಪ ಸಾತ್ವಿಕ ಪದಾರ್ಥಗಳನ್ನು ತಿಂದು ಮುಗಿಸುತ್ತಿದ್ದನು. ಸಂಸಾರದೊಂದಿಗೆ ಸರ್ವಸಂಗವನ್ನೂ ತ್ಯಜಿಸಲು ಆತನು ಸಿದ್ಧನಾದ ಈವರೆಗೆ ಮನೆಯಲ್ಲಿ ಗಂಡಹೆಂಡಿರಿಗೆ ಐಕಮತ್ಯವಿತ್ತು. ಈಗಮಾತ್ರ ಹೆಂಡತಿಯು ಆತನ ಇಷ್ಟಕ್ಕೆ ವಿರೋಧವಾಗಿ ಬಂದಳು. ಆಗ ಲಿಯೋವು, ತನ್ನ ಪಿತ್ರಾರ್ಜಿತ ಭೂಸ್ವಾಸ್ಥ್ಯವನ್ನೆಲ್ಲ ಆಕೆಯ ಹೆಸರಿಗೆ ಮಾಡಿಕೊಟ್ಟು, ಅವುಗಳ ಸಹಾಯದಿಂದ ಆಕೆಯು ಮಕ್ಕಳ ಪೋಷಣೆಮಾಡಿಕೊಂಡು ಉಪಜೀವಿಸಬೇಕೆಂದು ಏರ್ಪಡಿಸಿ ತನ್ನ ಉತ್ತರವಾದಿತ್ವವನ್ನು ನೀಗಿಕೊಂಡನು. ತರುವಾಯ ತನ್ನ ಗ್ರಂಥಗಳ ಮಾರಿಗೆಯಿಂದ ಬರುತ್ತಿದ್ದ ಆದಾಯವನ್ನೆಲ್ಲ ಜನೋಪಕಾರ ಕಾರ್ಯಗಳಿಗಾಗಿ ಧಾರೆಯೆರೆದುಬಿಡಬೇಕೆಂದು ಯೋಚಿಸಿದ್ದನು. ಆಗಲೂ ಆತನ ಪತ್ನೀಪುತ್ರರು ಅಡ್ಡವಾಗಿಬಂದು ಅಷ್ಟು ಹೆಚ್ಚು ವರಮಾನವಿರುವ ಆ ನಿಧಿಯನ್ನು ಹಾಗೆ ಪರಾಧೀನಗೊಳಿಸಿದರೆ, ಇಷ್ಟು ದೊಡ್ಡ ಕುಟುಂಬಪೋಷ

ಣೆಯು ಹೇಗಾಗುವುದು? ಇದೇನು ಮನೆತನವನ್ನೇ ಮುಳುಗಿಸುವ ಈ ಪ್ರಯತ್ನವೇಕೆ, ಬೇಡ' ಎಂದು ನಿವಾರಿಸಿ ಉಳಿಸಿಕೊಂಡರು. ಲಿಯೋವು ಅವರ ಸಂಗಡ ಹೆಚ್ಚು ಚರ್ಚೆಮಾಡದೆ, ನಿಮ್ಮ ಇಚ್ಛೆ ಬಂದಂತೆ ಮಾಡಿಕೊಳ್ಳಿರೆಂದು ಸುಮ್ಮನಾದನು. ಹೀಗೆ ವಿವೇಕಿಯಾದ ಆ ಗೃಹಿಣಿಯು ಕೇವಲ ವೈರಾಗ್ಯಪರ ಚಿತ್ತವೃತ್ತಿಯ ತನ್ನ ಪತಿಯ ಧ್ಯೇಯವನ್ನು ಅನುಸರಿಸಿ ಕಳೆದುಹೋಗುತ್ತಿದ್ದ ಸಂಸಾರದ ಅಪಾರವಾದ ಆಸ್ತಿಯನ್ನು ಉಪಾಯದಿಂದ ಭದ್ರಪಡಿಸಿಕೊಂಡಳು.

೧೮೮೬ ರಲ್ಲಿ ಆತನು *The Powers of Darkness* 'ದಿ ಪವರ್ ಆಫ್ ಡಾರ್ಕ್‌ನೆಸ್' - ಅಂಧಕಾರದ ಅದ್ಭುತಸಾಮರ್ಥ್ಯ - ಎಂಬೊಂದು ದುರ್ದಾಂತ ನಾಟಕವನ್ನು ರಚಿಸಿದನು. ಅದನ್ನನುಸರಿಸಿ ಮತ್ತೆ ಮೂರು ನಾಲ್ಕು ನಾವೆಲುಗಳು ಹೊರಬಿದ್ದುವು. ಅವುಗಳಲ್ಲಿ *Resurrection* ಎಂಬ ಗ್ರಂಥದಲ್ಲಿ, ರಷ್ಯಾದೇಶದ ಸೆರೆಮನೆಯ ನರಕಜೀವನವನ್ನು ಕುರಿತು ಕರುಳು ಮರುಗುವಂತೆ ವರ್ಣಿಸಿದ್ದಾನೆ. ಆ ಗ್ರಂಥವನ್ನು ಬರೆದುದರಲ್ಲಿ ಅಲ್ಲಿಯ ಪರಿತಾಪಕರ ಸ್ಥಿತಿಯನ್ನು ವರ್ಣಿಸುವುದು ಮಾತ್ರವಲ್ಲ-ಅವರ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಧರ್ಮಾತ್ಮರಿಂದ ಸಹಾಯವನ್ನು ಕೇಳುವ ಉದ್ದೇಶವೂ ಇದ್ದಿತು. ಮುಂದೆ ೧೮೯೧ ರಲ್ಲಿ ಪ್ರಾರಂಭವಾಗಿ ೧೮೯೨ ರವರೆಗೆ ಭಯಂಕರ ಹಾವಳಿಮಾಡಿದ ಕ್ಷಾಮಕಾಲದಲ್ಲಿ ಲಿಯೋ ಟಾಲ್ಸ್‌ಟಾಯಿಯು ಲಕ್ಷಾಂತರ ಜನಗಳು ಅನ್ನವಿಲ್ಲದೆ ಸಾಯುತ್ತಿದ್ದ ಭಯಂಕರ ದುಸ್ಥಿತಿಯನ್ನು ನೋಡಿ ಮರುಗಿ, ಲೇಶಮಾತ್ರವೂ ವಿರಾಮವಿಲ್ಲದೆ, ದೇಶದೇಶಾಂತರಗಳಲ್ಲಿದ್ದ ತನ್ನ ಮಿತ್ರರಿಗೂ, ತನಗೆ ಪರಿಚಯವಿದ್ದ ಇತರ ಹಲವರು ದೊಡ್ಡಮನುಷ್ಯರಿಗೂ ಪತ್ರಬರೆದು ತನ್ನ ದೇಶಕ್ಕೆ ಬಂದ ದುಸ್ಥಿತಿಯನ್ನು ತಿಳಿಸಿ, ಅದಕ್ಕೆ ಸಹಾಯಮಾಡಬೇಕೆಂದು ಭಿಕ್ಷೆಬೇಡಿದನು. ಕೇವಲ ಪರೋಪಕಾರಕ್ಕಾಗಿ ಮರುಗುತ್ತಿದ್ದ ಆ ಮಹನೀಯನ ಪ್ರಾರ್ಥನೆಯನ್ನು ಮನ್ನಿಸಿ, ಹಲವರು ಧರ್ಮಾತ್ಮರು ಅಪಾರ ಧನಸಹಾಯಮಾಡಿದರು. ಲಿಯೋವು ಹಾಗೆ ಒದಗಿದ ಆ ದಾನದ್ರವ್ಯವನ್ನು ನಿಸ್ಪೃಹತೆಯಿಂದ ವಿನಿಯೋಗಿಸಿ ಆ ಕಷ್ಟಕಾಲದಲ್ಲಿ ಅನೇಕಾನೇಕಮಂದಿ ಆರ್ತರನ್ನು ಕಾಪಾಡಿದನು. ಆತನ ಈ ಸಾಹಸಕ್ಕಾಗಿಯೂ ದಯಾಗುಣಕ್ಕಾಗಿಯೂ ಯೂರೋಪುಖಂಡವೇ ಆತನನ್ನು ಮುಕ್ತಕಂಠದಿಂದ ಹೊಗಳಿತು. ಆಗಲೂ ಆ

ನಿಸ್ಪೃಹಚಕ್ರವರ್ತಿಯು ಲೇಶಮಾತ್ರವೂ ಹೆಮ್ಮೆಗೊಳ್ಳದೆ,-ಪರರು ಕೊಟ್ಟ ದ್ರವ್ಯವನ್ನು ವಿನಿಯೋಗಿಸಿದ್ದರಲ್ಲಿ ತನ್ನದೇನು ಮಹತ್ವವಿದೆ ಎಂದು ಹೇಳಿಕೊಂಡನು. ಉದಾರಚರಿತ್ರರಿಗೆ ವಿಶ್ವವೇ ಕುಟುಂಬ ಎಂಬ ಆರ್ಯವಾಕ್ಯವು ವ್ಯರ್ಥವಾದೀತೇ ?

೧೮೯೫ನೆಯ ಸಂವತ್ಸರದಲ್ಲಿ ಆತನು ಮತ್ತೊಂದು ಮಹತ್ವದ ಕಾರ್ಯವನ್ನು ಕೈಕೊಳ್ಳಬೇಕಾಯಿತು. ಕಾಕಸಸ್ ಪರ್ವತಪ್ರಾಂತದಲ್ಲಿ ವಾಸಿಸುತ್ತಿದ್ದ ಡೌಖೋಬಾರ್ಸ್ ಎಂಬ ಪಂಥದ ಜನರನ್ನು ಸರ್ಕಾರದವರು ಸೈನ್ಯಕ್ಕೆ ಸೇರಬೇಕೆಂದು ನಿರ್ಬಂಧಗೊಳಿಸಲಾರಂಭಿಸಿದ್ದರು. ಅವರು ಲಿಯೋವಿನ ತತ್ವಗಳನ್ನನುಸರಿಸಿ ನಡೆವ ಸತ್ಯಾನ್ವೇಷಿಗಳಾಗಿದ್ದುದರಿಂದ ಯುದ್ಧಮಾಡುವ ಹಿಂಸಾಕೃತ್ಯವನ್ನು ಒಪ್ಪದೆ ಸೈನ್ಯಕ್ಕೆ ಸೇರಲು ಸಮ್ಮತಿಸಲಿಲ್ಲ. ಅವರ ಆ ನಿರಾಕರಣೆಯನ್ನು ದುರ್ಭಾವನೆಯಿಂದ ಅರ್ಥಮಾಡಿಕೊಂಡು ಸರ್ಕಾರದವರು ಅವರನ್ನು ನಿರ್ಬಂಧಿಸತೊಡಗಿದರು. ಆಗ ಲಿಯೋವು ತನ್ನ ಪ್ರತಿಜ್ಞೆಗೆ ವಿರುದ್ಧವಾಗಿ ತನ್ನ ಗ್ರಂಥಗಳಿಂದ ಉತ್ಪತ್ತಿಯಾಗುತ್ತಿದ್ದ ಲಾಭದ್ರವ್ಯದ ವಿಶೇಷ ಹಣವನ್ನು ಅವರ ಸಹಾಯಕ್ಕಾಗಿ ವಿನಿಯೋಗಿಸಿಕೊಂಡನು. ಅದು ಆತನ ಮನಸ್ಸಿಗೆ ವಿಶೇಷ ತಾಪವನ್ನುಂಟು ಮಾಡಿತಾದರೂ, ಆ ಬಡಜನಗಳಿಗೆ ಪ್ರಾಪ್ತವಾದ ಆ ಆಪತ್ಕಾಲದಲ್ಲಿ ಅದನ್ನು ವಿನಿಯೋಗಿಸಿಕೊಂಡ ತನ್ನಾ ದ್ರೋಹವನ್ನು ಕ್ಷಮಿಸಬೇಕೆಂದು ದೇವರನ್ನು ಪ್ರಾರ್ಥಿಸಿಕೊಂಡನು.

ಪುನಃ ೧೯೦೫ನೆಯ ಸಂವತ್ಸರದಲ್ಲೊಮ್ಮೆ ಸರ್ಕಾರಕ್ಕೆ ಪ್ರತಿಭಟಿಸಿ ಕಾದಾಡಬೇಕಾಯಿತು. ಆಗ ಆತನು-'ಇದೇನು? ರಾಜ್ಯದಲ್ಲಿ ಪ್ರಜಾಕ್ಷೇಮಕ್ಕೆ ಬದ್ಧಾಧರರಾದ ಸರ್ಕಾರದವರೇ, ಸುಳ್ಳಿಗೆ ನಾಚದೆ, ಪಾಪಕ್ಕೆ ಅಂಜದೆ, ಕ್ರೂರಮಾರ್ಗಗಳಿಂದ ಪ್ರಜೆಗಳನ್ನು ಹಿಂಸಿಸಿ ಎಂದು ಅವರನ್ನು ಸುಲಿಯತೊಡಗುವರೋ, ಮತ್ತು ಅಂತಹ ತಮ್ಮ ದಂಭದರ್ಪಗಳಿಂದ ತಮ್ಮನ್ನು ಕೇಳುವರು ಯಾರಿರುವರು ಎಂದು ಹೆಮ್ಮೆಪಡುವರೋ ಅಂದು ಪ್ರಜೆಗಳೆಲ್ಲರೂ ತಪ್ಪದೆ ವಿರೋಧಿಗಳಾಗಿ ನಿಂತು, ಸರ್ಕಾರಕ್ಕೆ ದ್ರೋಹವನ್ನಾಚರಿಸುವಲ್ಲಿ ದೃಢ ಪ್ರತಿಜ್ಞೆಯುಳ್ಳವರಾಗುವರು. ತಾವು ಹುಟ್ಟಿಹಾಕುವ ಕ್ರೌರ್ಯಬೀಜವೇ ಅವರ ಮನಸ್ಸಿನಲ್ಲಿ ಕ್ರೌರ್ಯ ವೃಕ್ಷವನ್ನು ಬೆಳೆಸಿ ವಿಷಫಲಗಳನ್ನು ತಂದೀಯುವುದು ಎಂಬೀ ನಿಸರ್ಗ ತತ್ವವನ್ನು ತಿಳಿಯದೆ, ಸರ್ಕಾರದವರು ನಿರ್ಗತಿ

ಕರಾದ ಪ್ರಜೆಗಳನ್ನು ಪೀಡಿಸಿದರೆ ಪ್ರಯೋಜನವೇನು' ಎಂದು ಧೈರ್ಯ ದಿಂದ ಸಾರಿ ಹೇಳಿದನು. ಸರ್ಕಾರದವರು, ಆತನ ನಡೆವಳಿಕೆಗಳನ್ನು ಕಾಯಲು ಗೂಢಚಾರರನ್ನು ನಿಯಮಿಸಿದರು. ಆದರೂ ಆತನು ಲೇಶಮಾತ್ರವೂ ಅಧೈರ್ಯಪಡದೆ ತನಗೆ ಸತ್ಯವೆಂದು ತೋರಿದ ವಿಚಾರಗಳನ್ನು ನಿರ್ಭಯವಾಗಿ ನುಡಿದು, ಸರ್ವದಾ ಬಡ ಪ್ರಜೆಗಳ ಪಾಲಿನ ದೈವವಾಗಿ ಅವರ ಬೆಂಬಲಕ್ಕೆ ನಿಂತಿದ್ದನು.

೧೯೧೦ನೆಯ ಸಂವತ್ಸರ. ಆಗ ನಮ್ಮ ಕಥಾನಾಯಕನಿಗೆ ಎಂಭತ್ತೆರಡು ವರುಷ ಪ್ರಾಯ. ಆಗ ಒಂದು ದಿನ ಆತನಿಗೆ ತಟಕ್ಕನೆ ಬುದ್ಧಿಭೇದವುಂಟಾಯಿತು. ಆಗ್ಗೆ ಮೂವತ್ತು ವರ್ಷಗಳಿಂದಲೂ, ಕ್ರಮ ಕ್ರಮವಾಗಿ ಸಾಧನೆಮಾಡುತ್ತ ಬಂದಿದ್ದ ತ್ಯಾಗಬುದ್ಧಿಯು ಅಂದು ತನ್ನ ಪರಮಾವಧಿ ಸ್ಥಿತಿಗೆ ಏರಿತು. ಸರ್ವಸಂಗವನ್ನೂ ಪರಿತ್ಯಾಗಮಾಡಿ, ಭಾರತದೇಶದ ಋಷಿಮುನಿಗಳಂತೆ ಗೃಹತ್ಯಾಗಮಾಡಿ, ವನವನ್ನು ಸೇರಿ ಪರಮಾತ್ಮಧ್ಯಾನದಲ್ಲಿ ಕಾಲಕಳೆಯಲು ನಿಶ್ಚಯಿಸಿ ಹೊರಹೊರಟನು. ಆತನು ಹೊರಟಕಾಲವಾದರೋ ಚಳಿಗಾಲ. ಅತಿಶಯ ಹಿಮ. ಚಳಿ. ಎಂಭತ್ತೆರಡು ವಯಸ್ಸಿನ ಆ ವೃದ್ಧನು, ಏಕಾಂಗಿಯಾಗಿ, ಪಾದಚಾರಿಯಾಗಿ ಯಾವ ಮಾರ್ಗವಾಗಿ ಎಲ್ಲಿಗೆ ಹೋದನೆಂಬುದು ಮನೆಯಲ್ಲಿ ಯಾರಿಗೂ ತಿಳಿದಿರಲಿಲ್ಲ. ಕೊನೆಗೆ ಆತನು ಎಲ್ಲಿಗೆ ಹೋದನೋ ಏನಾದನೋ ಕಂಡುಹಿಡಿಯಬೇಕೆಂದು ಆತನ ಒಬ್ಬ ಮಗಳೂ, ಅವರ ಕುಟುಂಬದ ವೈದ್ಯನೂ ಪ್ರಯತ್ನ ನಡೆಸಿದರು. ಆ ಮಹನೀಯನು, ವೃದ್ಧಾಪ್ಯದಿಂದಲೂ, ಚಳಿಯ ಬಾಧೆಯಿಂದಲೂ, ಅಸ್ಟಾಪೋವೋ ಎಂಬೊಂದು ದೂರದ ರೈಲ್ವೆಸ್ಟೇಷನ್ ಪಕ್ಕದಲ್ಲಿ ಪರಲೋಕ ಯಾತ್ರೆ ಮಾಡಿದಂತೆ ತಿಳಿಯಬಂತು. ಮೃತ್ಯುವು ಆತನನ್ನು ಆಕ್ರಮಣ ಮಾಡಿದಾಗಲೂ, ಆ ಮಹನೀಯನು ಸತ್ಯಾನ್ವೇಷಣೆಯ ಮಹತ್ಕಾರ್ಯದಲ್ಲೇ ತೊಡಗಿದ್ದನೆಂದೂ, ತನ್ನ ಆತ್ಮೋದ್ದೇಶದಂತೆ ನಡೆಯಲು ಸಂಸಾರದ ತಾಪತ್ರಯಗಳೂ ಪ್ರೇಮಾನುಬಂಧುಗಳೂ ವಿಘ್ನ ಬರುತ್ತವೆಂಬುದನ್ನು ತಿಳಿದು ಅದಕ್ಕಾಗಿಯೇ ಮನೆಬಿಟ್ಟು ಬಂದೆನೆಂದೂ ವಿಸ್ತಾರವಾಗಿ ಒಂದು ಪತ್ರದಲ್ಲಿ ಬರೆದಿಟ್ಟಿದ್ದು, ಅದು ತನ್ನ ಮರಣಾನಂತರ ತನ್ನ ಪತ್ನಿಗೆ ಸಿಕ್ಕುವಂತೆ ಏರ್ಪಡಿಸಿದ್ದನಂತೆ! ಹೀಗೆ ತನ್ನ ಜೀವಮಾನದ ಬಹು ಭಾಗವನ್ನು ಲೋಕಸೇವಾಕಾರ್ಯಕ್ಕಾಗಿಯೇ ವಿನಿಯೋಗಿಸಿದ ಆ ಮಹಾನುಭಾವನು,

ತಾನು ಹೇಗೆ ಪರೋಪಕಾರಿಯಾಗಿ ಜೀವಿಸಿದನೋ ಹಾಗೆಯೇ ಸತ್ಪುರುಷ ನೆಂದು ಪ್ರಪಂಚವೇ ಹೊಗಳುತ್ತಿರಲು, ತನ್ನ ಧನ್ಯ ಜೀವಿತವನ್ನು ಸಾಕ ಗೊಳಿಸಿ ಪರಲೋಕ ಪ್ರಯಾಣಮಾಡಿದನು. ಇಂತಹ ವ್ಯಕ್ತಿಜೀವಿಗಳೇ ಅಲ್ಲವೆ, ಲೋಕೋದ್ಧಾರಕರಾದ ಮಹಾತ್ಮರೆನ್ನಿಸಿಕೊಳ್ಳಲು ಅರ್ಹರಾ ಗುವರು.

## ಉಪಸಂಹಾರ

ನಮ್ಮ ಕಥಾನಾಯಕನು ಜನ್ಮತಃ ರಷ್ಯಾದೇಶೀಯನೇ ಆದರೂ, ಆತನು ತನ್ನ ಹಲವುಮುಖ್ಯ ಕಾರ್ಯಗಳ ಮೂಲಕ ತನ್ನ ದೇಶದ ಎಲ್ಲೆ ಕಟ್ಟನ್ನು ಮೀರಿ ಪ್ರಪಂಚದ ಮೂಲೆಮೂಲೆಯನ್ನೂ ಪ್ರವೇಶಿಸಿಬಿಟ್ಟಿ ದ್ದಾನೆ. ಆತನ ಕಾರ್ಯಕಲಾಪವೂ, ಗ್ರಂಥರಚನಾಕಾರ್ಯವೂ, ವಾಗ್ವಿ ಜೃಂಭಣೆಯೂ, ಕಾವ್ಯಾದಿರಚನಾಪ್ರೌಢಿಮೆಯೂ ಲೋಕವನ್ನೇ ಆಶ್ಚರ್ಯ ಗೊಳಿಸುವಂತೆ ಇವೆ. ಆತನು, ಮತ ಧರ್ಮ ನೀತಿ ಸಂಬಂಧವಾದ ಮತ್ತು ಸಾಮಾಜಿಕ, ರಾಜಕೀಯ ಮುಂತಾದ ಅನೇಕಾನೇಕ ಮುಖಗಳಿಂದ, ನೂ ತನ ನೂತನಗಳಾದ ಹಲವು ವಿಷಯಗಳನ್ನು ಜನಾಂಗದ- ಲೋಕದ ದೃಷ್ಟಿ ಪಥಕ್ಕೆ ತಂದಿಟ್ಟಿದ್ದಾನೆ. ಸಾಹಿತ್ಯಸೇವೆಯ ಕ್ಷೇತ್ರದಲ್ಲಾದರೂ ಸ್ವಲ್ಪವಲ್ಲ ಆತನ ಪರಿಶ್ರಮವು ಎಷ್ಟೋ ಸಣ್ಣ ಪುಟ್ಟ ಕಥೆಗಳು, ನಾಟಕಗಳು, ಕಾದಂ ಬರಿಗಳು ಇವಲ್ಲದೆ, ಆತನ ಮಾರ್ಗವನ್ನು ತಪ್ಪೆಂದು ಹಳಿದು ಪ್ರತಿಭಟಿಸುವ ವರ ಸಮಾಧಾನಕ್ಕಾಗಿ ಪತ್ರಿಕೆಗಳಿಗೆ ಬರೆದ ಲೇಖನಗಳು, ಹೀಗೆ ಆತನ ಲೇಖನ ವ್ಯವಸಾಯವು ಅಪಾರವಾಗಿದೆ. ತನ್ನ ಈ ಬಹುಮುಖ ಸೇವೆ ಯಿಂದ ಲಿಯೋ ಟಾಲ್‌ಸ್ಟಾಯಿಯು ಮರುಭೂಮಿಯಂತೆ ಬೆಂಗಾಡಾಗಿದ್ದ ತನ್ನ ಮಾತೃಭೂಮಿಯನ್ನು ನಂದನವನವೆನ್ನಿಸಿದನು. ಇಂದು ಅಲ್ಲಿಯ ಜನಗಳು ಅನುಭವಿಸುತ್ತಿರುವ ಸುಖಸಂತೋಷಗಳಿಗೂ, ಆ ದೇಶೀಯ ರನ್ನನುಸರಿಸಿ ಪರದೇಶಗಳವರು ಅನುಸರಿಸತೊಡಗುವ ದಿವ್ಯಾದರ್ಶಕ್ಕೂ ಆತನೇ ಮೂಲಕಾರಣನೆಂದರೆ ಅದರಲ್ಲಿ ಅತಿಶಯೋಕ್ತಿಯಿಲ್ಲ — ಹೀಗೆ ಸತ್ಯಾನ್ವೇಷಣೆಗಾಗಿಯೇ ತನ್ನ ಜೀವಿತವನ್ನು ಧಾರೆಯೆರೆದು ತ್ರಿಕರಣ ಶುದ್ಧಿಯಿಂದ ಪರೋಪಕಾರನಿರತನಾಗಿದ್ದ ಈ ಮಹಾನುಭಾವನ ದಿವ್ಯಾದ ರ್ಶವು ಸಕಲ ಸುಜನರಿಗೂ ಮಾರ್ಗದರ್ಶಕವಾಗಿ ಜಗತ್ತನ್ನು ಸತ್ಪಥದಲ್ಲಿ ನಡೆಯಿಸಿ ಜನ್ಮಸಾರ್ಥಕ್ಯವನ್ನುಂಟುಮಾಡಲು ಸಹಾಯಕವಾಗಿರಲಿ.

ತಥಾಸ್ತು.